ಗಣಪತಿರಾವ್ ಪಾಂಡೇಶ್ವರ

— ಕೃತ —

೧೯೫೧

[illegible]

[illegible]

Hubli 28.11.57

ಸುಪಂಥಾ

ಗಣಪತಿರಾವ್ ಪಾಂಡೇಶ್ವರ
— ಕೃತ —

ಮೊದಲ ಮುದ್ರಣ
೧೯೫೧

ಪ್ರಕಾಶಕರು:-
ಜಿ. ಆರ್. ಪಾಂಡೇಶ್ವರ.
ಹುಬ್ಬಳ್ಳಿ

ಮುದ್ರಕರು:-
ಕೆ. ಜಿ. ದೇಸಾಯಿ,
ದುರ್ಗಾಪ್ರೆಸ್ ಹುಬ್ಬಳ್ಳಿ.

ಬೆಲೆ—
ಉ. ಪ್ರ. ೧-೧೨-೦ ಸಾ. ಪ್ರ. ೧-೪-೦

ಅರ್ಪಣೆ

ಕವಿಗಳೂ ಪರೋಪಕಾರಿಗಳೂ
ಉತ್ತರಕನ್ನಡ ಜಿಲ್ಹೆಯ
ಪ್ರಮುಖರಲ್ಲೊಬ್ಬರೂ ಆಗಿರುವ
ಶ್ರೀ ಸ. ಪ. ಗಾಂವಕರ (ಬಿ. ಏ.)
ಎಂ. ಎಲ್. ಏ.

ಇವರಿಗೆ
ಪ್ರೀತ್ಯಾದರ ಪುರಸ್ಸರವಾಗಿ

ಗ್ರಂಥಕರ್ತ

ತಿದ್ದುಪಡಿ

ಅಶುದ್ಧ	ಶುದ್ಧ	ಪುಟ	ಪಂಕ್ತಿ
ನೀರೋಳದ್ದಿ	ನೀರೊಳದ್ದಿ	೯	೧
ನಿರಾಕಾರಾ	ನಿರಾಕಾರ	೬	೪
ದುರ್ವತ್ತ	ದುರ್ವೃತ್ತ	೪೫	೧೮
ಜಗದಾದ್ಯನಂತ	ಜಗದ ಆದ್ಯಂತ	೪೬.	೩

ಮುನ್ನುಡಿ

"Singing I was at peace
Above the clouds, outside the ring;
For, sorrow finds swift release in song
And pride its poise." – C. D. Lewis

ಧರ್ಮರಾಯನ ಅರಸಾಳ್ವಿಕೆಯ ಇಂದ್ರಪ್ರಸ್ಥದಲ್ಲಿ "ರಸರಸದ ಬಾವಿ ಮನೆಮನೆಗೆ ಜೇರಿ" ಎಂಬುದಾಗಿ ಹಳಗನ್ನಡದ ಕವಿ ಕುಕಿಲೋತ್ತುಂಗ–ಸುಕವಿಜನಮನೋನಿರ್ಮತ್ಸರ– ಪಂಪನು ಬಣ್ಣಿಸಿರುವನು. ಹಾಗೆಯೇ, "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಎಂದು ಆಧುನಿಕ ಕಬ್ಬಿಗರೊಬ್ಬರಿಂದ ಕೊಂಡಾಡಲ್ಪಟ್ಟ ನವ್ಯೋದಿತ ಕನ್ನಡದಲ್ಲಿ, ಮನೆಮನೆಗೆ ಕವಿಯು. ಈ ನಾಡು ದಿನಿಬಿಮ– ಎಂದೊರೆವಂತೆ, ಕವಿಜೀವವಿಲ್ಲದ ಹಳ್ಳಿ–ಪೇಟೆ–ಪಟ್ಟಣ ಇಲ್ಲವೆಂಬಂತಾಗಿದೆ. ಕನ್ನಡದ ಜನತೆ ಈ ರೀತಿ ಕಾವ್ಯರಸಸ್ನಾತವಾಗುತ್ತಿರುವುದು ಬರಲಿರುವ ಭವ್ಯ ಪ್ರಭಾತದ ಅರುಣೋದಯವೇ ಸರಿ. ಬಾಳಿನ ಅವಸ್ಥಾಂತರದ ಸಂದುಗಟ್ಟಿನಲ್ಲಿ ಬಂದುನಿಂತಿರುವ ನಾನು ಈ ಕವಿಕದಂಬದ 'ಗೊಂದಳ' (Chorus)ದಲ್ಲಿ ನನ್ನೀ ಕಿನ್ನರಿ ಬಾರಿಸಿ, ಈ ಪುಟ್ಟ ಪುಷ್ಪಾಂಜಲಿಯನ್ನು ಕನ್ನಡತಾಯಿಯ ಪಾದಾರವಿಂದಕ್ಕೆ ಅರ್ಪಿಸಿರುವೆನು.

ಈ ಸಂಗ್ರಹದ ಕವನಗಳಲ್ಲಿ ಹಲವು ರಚಿತವಾದ ಅಂದಂದೇ ಬೇರೆ ಬೇರೆ ಪತ್ರಿಕೆಗಳಲ್ಲಿ ಬೆಳಕು ಕಂಡವು; ನಾಲ್ಕು ೧೯೩೮ರಲ್ಲಿ ಪ್ರಕಟಗೊಂಡ ನನ್ನ "ಹೂಗೊಂಚಲು"ಲ್ಲಿ ನಾಲ್ಕು ೧೯೪೦ರಲ್ಲಿ ಪ್ರಕಟಿತವಾದ ನನ್ನ "ಜೆಂಗಲಿನ"ದಲ್ಲಿ ಬಂದವು. ಇವೆಲ್ಲವೂ ಭಾವಸ್ಫುರಣವಾದಂತೆ ಆಗಿಂದಾಗಲೇ ಬರೆದುದಾಗಿದ್ದು, ಪ್ರಕಟಿಸಿದ ತಾರೀಖು, ಸಂದರ್ಭ, ಮತ್ತು ಪತ್ರಿಕೆಗಳ ಹೆಸರುಗಳನ್ನು ಆಯಾ ಕವನದ ಕೆಳಗೆ ಕೊಟ್ಟಿರುತ್ತೇನೆ. ಇವುಗಳಲ್ಲಿ ಕೆಲವಕ್ಕೆ ರಾಗ–ತಾಳ ಸೂಚಿಸಿದುದ ಮಿತ್ರ, ಸಂಗೀತವಿದ್ವಾನ್ ಚ|| ನಾರಾಯಣಶಾಸ್ತ್ರೀ (ಧಾರವಾಡ ಆಕಾಶವಾಣೀ ಕೇಂದ್ರ) ಇವರಿಗೆ ಉಪಕೃತನಾಗಿರುವೆನು. ಅದೇಮೇರೆಗೆ, ೧೯೩೯ರಲ್ಲಿ ಪುಷ್ಪಾಂಕದ "ಕರ್ನಾಟಕ ಕೇಸರಿ"ಯಲ್ಲಿ ಪ್ರಕಟವಾಗಿದ್ದ "ಬಾಳ್ವೆ" ಎಂಬ ನನ್ನ ಚಿಕ್ಕ ಕವನವನ್ನು ಕೇಳಿದೊಡನೆಯೇ

ಯಥಾಪ್ರತಿ ಬರೆದು ಕಳುಹಿಸಿರುವ ಹಿರಿಯ ಸಾಹಿತಿಗಳೂ 'ಭರತೇಶವೈಭವ' ಮಹಾಕಾವ್ಯವನ್ನು ಸಂಪಾದಿಸಿ ಬೆಳಕಿಗೆ ತಂದವರೂ ಆದ ಶ್ರೀ ಉಗ್ರಾಣ ಮಂಗೇಶರಾಯರಿಗೆ ಆದರದ ವಂದನೆ ಅರ್ಪಿಸುತ್ತೇನೆ. ಕಳೆದ ವರ್ಷ (ಕಾರಣಾಂತರದಿಂದ ಕೇವಲ ೮೦ ಪುಟಗಳ ಮಿತಿಯೊಳಗೇ) ಪ್ರಕಟಗೊಂಡ ನನ್ನ "ರಾಧಸ್" ಪುಸ್ತಕಕ್ಕೆ ಅದರ ಅರ್ಹತೆಗೆ ಅದೆಷ್ಟೋ ಪಟ್ಟು ಹೆಚ್ಚಾದ ಪ್ರೇಮಾದರದ ಪುಣ್ಯವರ್ಷವನ್ನು ಕರೆದ, ಸಹೃದಯದ ಭಾಷಾಬಂಧುಗಳಿಗೂ ವಿಮರ್ಶಕರಿಗೂ ನಾನಿಲ್ಲಿ ಕೃತಜ್ಞತೆ ಅರ್ಪಿಸದಿರಲಾರೆನು. ಇತರ ಕೆಲಸಗಳ ಒತ್ತಡ ವಿದ್ದಾಗ್ಯೂ ಕೆಲವೇ ವಾರಗಳಲ್ಲಿ ಇದನ್ನು ಮುದ್ರಿಸಿಕೊಟ್ಟ "ದುರ್ಗಾ"ಪ್ರೆಸ್ ಒಡೆಯರಾದ ಮಿತ್ರ ಶ್ರೀ ಕೆ. ಜಿ. ದೇಸಾಯಿಯರಿಗೆ ನನ್ನ ಪ್ರೀತ್ಯಾದರವನ್ನಿಲ್ಲಿ ವ್ಯಕ್ತಮಾಡುತ್ತೇನೆ.

ನಾನು ಕವನಿಸತೊಡಗಿದ್ದು ೧೯೩೩ರಲ್ಲಿ ಹೈಸ್ಕೂಲ ವಿದ್ಯಾರ್ಥಿಯಾಗಿದ್ದಾಗ. ಬಾಳಿನ ಬಗೆಬಗೆಯ ಬೇಗುದಿಯಲ್ಲಿ ನೊಂದು-ಬೆಂದ ನನಗೆ ದೀರ್ಘ ಕವನ-ಕಾವ್ಯಗಳ ರಚನೆಯ ಚಿತ್ತೈಕಾಗ್ರತೆಯಾಗಲೀ ಉತ್ಸಾಹಪ್ರದ ಜೀವನ ಸನ್ನಿವೇಶದ ಸ್ಥೈರ್ಯವಾಗಲೀ ದೊರೆತಿರುವುದಿಲ್ಲ. ನನ್ನ ಅಲ್ಪಶಕ್ತಿಗನುಗುಣವಾಗಿ ಕೈಕೊಂಡಿದ್ದ ಸಾರ್ವಜನಿಕ ಜೀವನ, ಪತ್ರಿಕೋದ್ಯಮ ಮೊದಲಾದ ಬಹಿರ್ಮುಖ ವೃತ್ತಿಗಳ ಪರಿಣಾಮವೆಂಬಂತೆ ನನ್ನ ಸುದೈವವೊ ದುರ್ದೈವವೊ ನನಗೆ ನಾನೇ ಹಿಂಬಲ ಮುಂಬಲವಾಗಿ ನಿಲ್ಲಬೇಕಾಗಿ ಬಂದಿದೆ. ಆದರೂ ದೃಷ್ಟಿಯನ್ನು ಅಂತರ್ಮುಖ ಮಾಡಿಕೊಂಡು ದೇವದೇವನನ್ನು ಮೊರೆಹೊಕ್ಕು "ನಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂತಾತ ಗಚ್ಛತಿ" ಎಂಬ ಭಗವದ್ಗೀತೋಕ್ತಿಯನ್ನೇ ದಾರಿದೀಪವಾಗಿಟ್ಟುಕೊಂಡು, ಧೈರ್ಯದಿಂದಲೇ ದಾರಿ ನಡೆದಿರುವೆನು.

ಕನ್ನಡದ ವಿಜ್ಞರಸಿಕರು ನನ್ನೀ ಅಲ್ಪ ಸೇವೆಯನ್ನು ಪ್ರೀತಿಪುರಸ್ಸರವಾಗಿ ಸ್ವೀಕರಿಸಿ ಆಶೀರ್ವದಿಸಲೆಂದು ದೇವದೇವನನ್ನು ಪ್ರಾರ್ಥಿಸುತ್ತೇನೆ.

ಇಂತು ವಿನಂತಿಪ,

ಹುಬ್ಬಳ್ಳಿ
೨೧-೧-೧೯೫೧

ಕನ್ನಡತಾಯಿಯ ಪಾದಧೂಳಿ—
ಗಣಪತಿರಾವ್ ಪಾಂಡೇಶ್ವರ

—: ಅನುಕ್ರಮಣಿಕೆ :—

		ಪುಟ
	ಸುಪಂಥಾ	 I
	ಗದ್ಯ–ಪದ್ಯ	 III
೧	ಉದಯಘೋಷ	.... ೧
೨	ಭಾವಗೀತೆ	.... ೨
೩	ನಾಕ–ನರಕ	.... ೫
೪	ಪ್ರಕೃತಿ ರುದ್ರಲೀಲೆ	.... ೮
೫	ಧ್ವಜಗೀತೆ	.... ೧೧
೬	ಜಯಭಾರತ ಜನನಿ	.... ೧೩
೭	ನಿಜಸ್ವರಾಜ್ಯ ಮುಟ್ಟು	.... ೧೪
೮	ಪಂಜಾಬ–ಕಾಶ್ಮೀರ	.... ೧೬
೯	ವಿಶ್ವಶಾಂತಿ !	.... ೧೭
೧೦	ಕಾಸರಗೋಡಿನ ವೀರಕಂಕಣ	.... ೨೦
೧೧	ಕೀರ್ತಿಕಾಯ ಅಮರಗಾಂಧಿ	.... ೨೧
೧೨	ನವಭಾರತ ವೀಥಿ, ಜ್ಯೋತಿ	.... ೨೨
೧೩	ರಾಷ್ಟ್ರಪಿತ ತರ್ಪಣ	.... ೨೩
	ಇಲ್ಲಿ-ಅಲ್ಲಿ	.... ೨೪
೧೪	ಶ್ರೀ ಅರವಿಂದಾರ್ಪಣಮಸ್ತು	.... ೨೫
೧೫	ನಗ್ನ ನಿಸರ್ಗ	.... ೨೬
೧೬	ಅರವಿಂದರ ಮೌನಯೋಗ	... ೨೭
೧೭	ದೀಪಾವಳಿ	.... ೨೮
೧೮	ಸರೋಜಿನಿ ದೇವಿ	.... ೨೯
೧೯	ಕವಿಕೋಕಿಲಸಾಲಿ !	.... ೩೦
	ಸಂಶಯ, ಪ್ರೇಮ	.... ೩೧
೨೦	ಹೊಸಗನ್ನಡದ ಪಂಪ–ಅಮರ 'ಶ್ರೀ'	.... ೩೨
೨೧	ಬೆಳಕಿನ ಕವಿ ಶ್ರೀ ಬೇಂದ್ರೆ	.... ೩೩
೨೨	ರಾಮಾಯಣ ದರ್ಶನಕ್ಕೆ	.... ೩೬
೨೩	ಶ್ರೀಮದ್ಬಸವಾರಾಧನಂ	.... ೩೮
೨೪	ಸಾಹಿತ್ಯಯೋಗಿ 'ಶ್ರೀನಿವಾಸ'	.... ೩೯
೨೫	ಪ್ರಣಯಭಾಷಿತ	.... ೪೦

೨೬ ಏನೊ ತಡವಾಯಿತೆನೆ.... .... ೪೧
೨೭ ಕವಿನೋಟಿಕೆ ೪೩
೨೮ ಬಾಹ್ಯಲೋಲುಪ ಭಕ್ತರು ೪೪
೨೯ ಶ್ರೀ ಡಿ. ವಿ. ಜಿ. ೪೫
೩೦ ಸುಕರ–ದುಷ್ಕರ ಕರ್ಮವೀಥಿ ೪೬
೩೧ ಬಾಳ್ವೆ ೪೮
೩೨ ಸಂಚಿತಸಕ್ತಿ ೪೯
೩೩ ದಿನಾಕರಾಭಿನಂದನಂ ೫೦
೩೪ ಶ್ರೀ ದೇವೀಸ್ತವ ೫೨
೩೫ ಶ್ರೀ ಉಡುಪಿ ಕೃಷ್ಣಾಷ್ಟಕಂ ೫೪
೩೬ ಮಾನಸಗಂಗಾ ೫೬
೩೬ ದಾರಿ ೫೭
೩೭ ಸತ್ಯಾಂತರಂಗ ೫೮
೩೮ ತನು ೫೯
೩೯ ಬೇಡಿಕೆ ೬೦
೪೦ ಚಿತ್ರವ್ಯಾತಕೊ ಕಂಬಿಪೆ ೬೧
೪೧ ಮಾಯೆ ೬೨
೪೨ ನಿರಾಶೆ ೬೩
೪೩ ಗುರುದೇವ ೬೪
೪೪ ವಿಧಿಗೆ ೬೫
೪೫ ಗುರುದರ್ಶನ ೬೬
ಕವಿಗಳು ೬೭
೪೬ ಎನಿತು ರಮ್ಯವೊ ಹರಿಯ ಸ್ವರೂಪ ೬೮
೪೭ ಅಪ್ಪಿಕಿಂತಪ್ಪಿ ನಾನು ೬೯
೪೮ ಎನಿದು ಸುಸ್ವಪ್ನ ೭೦
೪೯ ಸಹ್ಯಾದ್ರಿಯ ಕರೆ ೭೧
ಹುಟ್ಟಿನ ಬಟ್ಟಲು ೭೨
೫೦ ಪುಷ್ಪಾಂಜಲಿ ೭೪
೫೧ ಅಂತರ್ಮುಖಿ ೭೫
೫೨ ಜಯಮಂಗಳ ಮಾಹೇಶ್ವಂ ೭೬

ಗದ್ಯ–ಪದ್ಯ

ಸ್ವಾದುಪೀಠದಮೇಲೆ ಸತ್ಯ ಕೂತಿತ್ತು.
ಸುಂದರ ಸೌಂದರ್ಯ ಕೈಕಟ್ಟಿ ನಿಂತಿತ್ತು....

[illegible]
[illegible]
ಸುತಿಯಿಂದ ಅಡಿಗಡಿಗೆ [illegible]!
ನಡೆದಾಡುವದಿನ್ನಾ [illegible]!

*ಅಲಸದಿಯ ಬಿನ್ನವಿಡೀ [illegible]
[illegible]
ಪದಸಂಚಿಯಲಿ ಪುಟದ [illegible]!
ಸತ್ಯಕೆಸ್ಫೂರ್ತಿಗನಿಸು ಕರುಣೆ [illegible]

[illegible]

[illegible]

* [illegible]

IV

ಮೋಡ ಮಿಂಚಿಸಿದಂತೆ, ಚಿಂತೆ ನಕ್ಕಂತೆ,
ಬಂದ ಬರಿಗೈಲೊಬ್ಬ ಭಾಗ್ಯಹೊತ್ತಂತೆ!

[illegible]
[illegible]
[illegible]
ಸರ್ವ ಜೀವಂಗಳನಿಸಿದುದನಪ್ಪಿತ್ತು !
ತಮಯರಾಶಿಯನುಂಡ ಸ್ವರ್ಣಕಣವಿತ್ತು !
[illegible]
[illegible]
[illegible]
ಯುಗಯುಗಂಗಳ ಚಕ್ರ ಪರಿವರ್ತನವನೆಳೆದು,
ಜಡಜಲಾಗ್ನಿವಾಯು ರೂಪಂಗಳಂ ಕಳೆದು,
ದಿಕ್ಕಾಲಗಳನೆ ಧಿಕ್ಕರಿಸಿ ನಿಂದಿಹ ತತ್ತ್ವ—
[illegible]
[illegible] ಬೆಳ್ಳಿ ಬಂಗಾರಗಳ ತೆರದಿ
[illegible]

* * * *

[illegible]
[illegible]
[illegible]
[illegible]

೧ ಉದಯ ಘೋಷ

(ರಾಗ:- ಭೂಪಾಳಿ ರೂಪಕತಾಳ)

ಏಳು, ಏಳು ಸುಕುಮಾರಾ, ಸೌಂದರ್ಯದ ಸಾರಾ
ಏಳು ಆತ್ಮಕಲೋದ್ಧಾರ, ಸತ್ಯದ ಸಾಕಾರಾ ||

ಮೆಲ್ಲ ಮೆಲ್ಲ ಬೀಸಿ ಸೂಸಿ ಸರಿಯಿತು ತಂಗಾಳಿ
ಚೆಲ್ಲಿಸಳಿನ ಮಲ್ಲಿಗೆಯಲಿ ಮೊರೆಯಿತು ಭೃಂಗಾಳಿ ||

ಮೂಡಣಮರಿ ಕಿರಣಾಳಿಗೆ ನಡುಗಿತು ತಮದೋಳಿ
ಬಾಡಿರುವೆದೆಯರಳಿಪುದಿದೆ ಕರ್ತವ್ಯದ ಕೇಳಿ ||

ಪಲ್ಲವಿಸಿದೆ ತರುಲತೆಯಲಿ ಋತುಸ್ಪೃ ಶೃಂಗಾರ
ಬಲ್ಲೈಸಿದೆ ಭೂತಲವನೆ ಬಿಸಿಲಿನ ಬಂಗಾರ ||

ನರನಾಡಿಯೊಳೋಲಾಡಿದೆ ನವಚೇತನ ಸಾರ
ನರಲೋಕಕೆ ಸುರಲೋಕವು ಅವತರಿಸಿದೆ ಸ್ಫುರಾ ||

ಅವ್ಯಕ್ತದ ಮಧುರನಾದ ಸುಖಾನಂದಲೋಲ
ಭೂವ್ಯೋಮದ ಸ್ವರ್ಣಸೇತು ಅರುಣೋದಯ ಕಾಲ ||

೩-೧೧-೧೯೪೮

(ಕಿರಣ— ಶಿರಸಿ)

೨ ಭಾವಗೀತೆ

ಯಾವ ಲೋಕದ ಕನಸೆ
ಯಾವ ಬೆಳಕಿನ ಮನಸೆ
ಎನ್ನ ಬಗೆಯಂಚಿನಲಿ
ಮಿಂಚುತಿಹ ನೆನಸೆ?

ಮೌನಗಿರಿ ಸಂಜಾತೆ
ಗಾನ ಗಂಗಾಸ್ರೋತೆ,
ಬಾಳ ಬೆಳಗಿಪ ಪುಣ್ಯ
ಭಾವಗೀತೆ!

ಸಂಸ್ಕೃತಿಯ ಸಂಪ್ರೀತೆ,
ವಾಙ್ಮಯವ್ರತಸ್ನಾತೆ,
ಪ್ರೇಮ ಕರುಣಾನಂದ
ಸಿದ್ಧಿದಾತೆ!

ಹೊಳೆವ ಸೊಬಗಿನ ಸೆಲೆಯೆ,
ಒಲಿದ ಸತ್ಯದ ನೆಲೆಯೆ,
ಎನ್ನೆದೆಯ ನವರಸಾಮೃತ
ಶರಧಿಯಲೆಯೆ,

ನುಡಿಯ ಪಕ್ಕವ ಬೀಸಿ,
ಅನುಭವಾಗಸವೀಸಿ,

ಪರಡ ಪರಿಮಳ ಸೂಸಿ,
  ನಲಿವ ಕಲೆಯುಲಿಯೆ!

ಸತ್ಯತತ್ವದ ತೆನೆಯೆ,
ದಿವ್ಯ ಶಾಂತಿಯ ಕೆನೆಯೆ,
ಶೃಂಗಾರರಸಧುನಿಯೆ,
  ಮನದಿ ಹಸಿಯೆ!

ಕಳೆಯೆ ದುಃಖಭ್ರಮೆಯ
ರಸಕಲೆಯ ಪೂರ್ಣಿಮೆಯ
ತಳೆದು ಒಹ ವಾಕ್ಸುಧಾ-
  ಸೂತಿ ಹೃದ್ಧ್ವನಿಯೆ

ಹೊಗಳಿಕೆಯ ತೆಗಳಿಕೆಯ
ನಾಕನರಕವ ಮೀರಿ,
ಕಣ್ಗೆ ಕಾಣದ ಸ್ವಪ್ನ
  ಲೋಕವನೆ ಸುತ್ತಿ,

ನಾದಸಾಗರದಾಳ
ಕಿಳಿದರ್ಥಮಣಿಜಾಲ
ರಚಿತಪದಮುಕುಟದಿಂ
  ದೆಸೆವೆ ಮೊಗವೆತ್ತಿ

ರಸಿಕರಿಗೆ ನವನೀತೆ,
ಅರಸಿಕರಿಗವಿನೀತೆ,

ಎನ್ನ ಸರ್ವಾರಿಷ್ಟ
ಶಾಂತಿದಾತೆ.
ಸತ್ಪುರುಷರಾಯುಸವ
ಪರಿಹರಿಪ ಪಾಯುಸವ
ಪಾಕಿಸುವ ಹೃದ್ಯಜ್ಞ
ವೇದಿ ಸಂಭೂತೆ!

೪-೫-೫೦
(ಕರ್ಮವೀರ- ಹುಬ್ಬಳ್ಳಿ)

೨. ನಾಕ--ನರಕ

ಊರ ಹೊರಗಣ ಬಯಲ
ನಡುವಣಾಲದ ಕೆಳಗೆ
ಕುಳಿತೆನೇಕಾಕಿಯಾಗಿ ||

ಬಳಿಯೆ ಹಳ್ಳಿಯು ಹಾದಿ
ಹಳ್ಳತಿಟ್ಟಗಳಿದೆಯು
ದೃಶ್ಯರಸಿಕತೆಯ ತೂಗಿ-
ಹಳ್ಳಿಹಾಡಿನ ಹಾಗೆ-
ಬಯಲ ಹಸುರಿನ ಮೇಗೆ
ಸಾಗಿತ್ತು ಬಾಗಿ ಬಾಗಿ ||

ಸಂಜೆ ಹೊಂಜೆರಗೆತ್ತಿ
ಗಾಳಿ ಗೋಪುರ ಹತ್ತಿ
ನೀಲನಗ್ನತೆಯೊಳೊತ್ತಿ,
ತಾರಾಕ್ಷರದಿ ದಿವ್ಯ
ಮೌನ ಭಾವದ ಕಾವ್ಯ
ಬರೆದಳದೊ ಸುತ್ತಿ ಸುತ್ತಿ ! ||

ಮೌನ ಮೈತಾಳಿದೊಲು
ಕತ್ತಲೆಯನುಟ್ಟು ಬಾ
ಸ್ನೇರೆ ಬಂದಳು ಚಂದ್ರಹಾಸಬೀರಿ ||
ಲೋಕ ಲೋಕದ ಚಿಂತೆ

ಘಸಿಸಿ ಕುಳಿತಿರುವಂತೆ
ಕುಳಿತಿನ್ನ ಮನಕಮ್ಮೃತರೇಖೆ ಗೀರಿ ||

ಬಯಲ ಬಟ್ಟೆಯು ಅಂಚು
ಹರಿವ ಹಳ್ಳದ ಹೊಂಚು—
ತಾರಕಿತ ನಭದ ಮಿಂಚು
ಇಳೆಗಿಳಿದು ಸಂಚರಿಸಿ
ತೆನೆ ನೀರು ನೀರವದಿ
ಗ್ರಾಮ ಗಡಿ ಕಾವ ಸಂಚು !

ಜಾಲಿ ಬೇವಿನ ಗಿಡದ
ಕಳ್ಳಿ ಕಂಟೆಯು ದಡದ
ಹಳ್ಳದಾಚೆಯಲಿ ಹಳ್ಳಿ—
ಹಗಲ ಬೇಗೆಗೆ ಬೆಂದು
ಸಂಜೆ ಗಾಳಿಯ ಮಿಂದು
ತೂಕಡಿಪೊಲೆಸೆದುದಲ್ಲಿ !

ಯೋಗಿ ಜೀವನ ಸುಪ್ತ
ಸನ್ನ ಚಿತ್ಕಳೆಯಂತೆ
ಮಿನುಗಿತಾ ಹಳ್ಳಿ ದೀಪ !
ನಾಗರಿಕ ಜೀವನದ
ಕತ್ತಲಿಡಿದೆನ್ನೆದೆಗೆ
ಜಿನುಗಿತಾನಂದರೂಪ ||

ಎಡಗಡೆಯಲ್ಲೀ ಹಳ್ಳಿ,
ಈ ಹಾದಿ, ಈ ಮೌನ,
ಸಾತ್ವಿಕಾನಂದ–ರಾಜ್ಯ!
ಬಲಗಡೆಯೊಳದೊ ನಗರ,
ರಸ್ತೆ, ವಿದ್ಯುದ್ದೀಪ,
ನಾಗರಿಕನರಕ ತ್ಯಾಜ್ಯ!

✦ (ಹುಬ್ಬಳ್ಳಿ ಮತ್ತು ಗೋಪನಕೊಪ್ಪದ ನಡುವೆ
ಕೂತಾಗ ಬಂದ ಭಾವ)

೧೦–೧–೧೯೫೦.

(ವಿಶಾಲಕರ್ನಾಟಕ)

೪ ಪ್ರಕೃತಿ ರುದ್ರಲೀಲೆ *

(೧)

ಕಂಪ! ಕಂಪ!
ಭೂಮಿ ಕಂಪ........
ನೆಲ ನಡುಗಿತು
ಜಲಪಡಗಿತು
ಬೆಟ್ಟ ಕುಸಿದು ಬಿದ್ದಿತು
ಕೊಳ್ಳ ಮೇಲಕೆದ್ದಿತು!
ಹರಿವ ಹೊಳೆಯು ಇಂಗಿತು
ಭೂಮಿ ಊರ ನುಂಗಿತು!

(೨)

ಬೆಟ್ಟ ಬೆಟ್ಟ ಸುತ್ತಲೆಲ್ಲ
ಇಳಕಲಲ್ಲಿ ಜನಪದ,
ಹೊಳೆಯ ಕಿರಿಯ ದಡಗಳೆಲ್ಲ
ಬೆಳೆಗಳಮಿತ ಸಂಪದ.
ಹಕ್ಕಿಪಕ್ಕಿ ಉಲಿಯುತಿತ್ತು
ಜೀವವೆಲ್ಲ ನಲಿಯುತಿತ್ತು....
ಹರಿವ ಹೊಳೆಯೆ ಉಕ್ಕಿತು
ಸರ್ವವನ್ನು ಮುಕ್ಕಿತು!
ನಿಮಿಷಾರ್ಧದೆ ಪರ್ವತಾಳಿ

ನೀರೋಳದ್ದಿ ಕರಗಿತು
ಬುಸುಗುಟ್ಟುವ ಬಿರುಗಾಳಿ!
ದಿಗ್ದಿಗಂತ ಮರುಗಿತು!
ಸೀರಿನೊಂದು ನಿರಾಕಾರಾ
ನೆಲವನೆಲ್ಲ ಹಬ್ಬಿತು!
ಬೆಳಕಿನೊಂದು ಸಾಕಾರ
ಬಾನಿನಂಚೊಳುಬ್ಬಿತು!
ಚಲನವಲನ ಮಲಗಿತು
ಮೌನವೊಂದೆ ಉಳಿಯಿತು!

(೩)

ಹಿಮವ ಹೊದ್ದ ಗಿರಿಯ ಶಿರಧ
ಬ್ರಹ್ಮರಂಧ್ರ ಬಿರಿಯಿತು–
ಬೆಂಕಿಬುಗ್ಗೆ ಭಗ್ಗನುರಿದ
ತೆರದಿ ಲಾವ ಹರಿಯಿತು....
ಮಿಂಚಿನ ಹೊಳೆ ಹರಿದುದೇನೊ?
ಕೆಂಡದ ಮಳೆ ಸುರಿದುದೇನೊ?
ತಪ್ತಲೋಹ ನದಿಯೆ ಹರಿದು
ಜೀವಸೃಷ್ಟಿಯನ್ನೆ ಉರಿದು
ಕರಗಿಸಿತ್ತು ಅರಗಿಸಿತ್ತು!
ಮೃತ್ಯುವನೂ ಮರುಗಿಸಿತ್ತು!

(೪)

ಪ್ರಳಯರುದ್ರ ಮೌಳಿಯಿಂದ
ಅಗ್ನಿಗಂಗೆ ಇಳಿದಳೆ?
ಮನುಜಕುಲದ ಪಾಪವೃಂದ
ಬೆಂಕಿಯಿಂದ ತೊಳೆದಳೆ?
ಕೆಟ್ಟುದೊಳ್ಳಿದೆಂಬ ಭೌತ
ಜ್ಞಾನವಿಕೃತಿ ಲಯಸಿತೆ?
ನವಸೃಷ್ಟಿಯನೆರಕಹೊಯ್ಯೆ
ಮೂಲ ಪ್ರಕೃತಿ ಬಯಸಿತೆ?

೯—೧೦—೧೯೫೦
ಆಸಾಂ ಭೂಕಂಪದಿಂದ ಪ್ರೇರಿತ.
(ವಿಶಾಲಕರ್ನಾಟಕ)

೫ ಧ್ವಜಗೀತೆ

ನಮ್ಮ ಧ್ವಜ, ನಮ್ಮ ಧ್ವಜ!
ನಮ್ಮ ರಾಷ್ಟ್ರಕಿದೇ ಧ್ವಜ!!
ಭೀತಿಬಿಟ್ಟು ನೀತಿ ತೊಟ್ಟು,
ನಮ್ಮ ಧ್ವಜವ ಮೇಲೆ ಕಟ್ಟು!
ಸತ್ಯದ ಸೆಲೆ ಶಾಂತಿಯ ಕಲೆ-
ನಮ್ಮ ಧ್ವಜದಪಾರ ಬೆಲೆ!
ಕಡಿದರಷ್ಟೆ, ಮಡಿದರಷ್ಟೆ,
ಧ್ವಜದ ಮಾನ ಉಳಿಸಲಿಷ್ಟೆ!

೧೪-೮-೧೯೪೭
(ನವಯುಗ)

—೦೦೦—

೬ ಜಯ ಭಾರತ ಜನನಿ

(ರಾಗಃ- ಮಾಲಕಂಸ ರೂಪಕತಾಳ)

ಜಯ ಜನನಿ, ಭರತಾವನಿ
ಜಗಜ್ಜನನಿ ಪಾವನಿ ||
ವೇದಧ್ವನಿ ವಿಸ್ತಾರಿಣಿ
ಜಯತು ಜಗತ್ತಾರಿಣಿ ||

ಹಿಮಗಿರಿಶಿರೆ, ಸಹ್ಯಕರೆ
ವಿಂಧ್ಯಸ್ತನಿ ಯೋಗಿನಿ ||
ಗಂಗೆಯಮುನೆ ಮಂದಗಮನೆ
ತಾಯೆ ಜಗನ್ಮೋಹಿನಿ ||

ಮಾನವಕುಲದಘಸಂಕುಲ
ಕಶ್ಮಲ ಜಲ ಶೋಷಿಣಿ ||
ಸುಧಾಸೂತಿಯಂತೆ ಖ್ಯಾತಿ
ವೆತ್ತ ಜಗತ್ತೋಷಿಣಿ ||

ಇತಿಹಾಸವೆ ಗತಹಾಸವೆ ?
ನವರಸಕೃತಿ ಬಂಧಿನೀ ||
ಉಚ್ಚ ನೀಚ ಭೇದಾಶನಿ
ಚಿರಾಮೃತ ಸ್ಯಂದಿನೀ ||

ನಮೋ ನಮೋ ಭರತಾವನಿ
ನಮೋ ಲೋಕಸಂಜೀವಿನಿ ॥
ಸತ್ಯದ ಖನಿ ಶಾಂತಿಯ ಧ್ವನಿ
ದೇವಿ ಭರತಭಾಮಿನಿ ॥

೧೭-೧-೧೯೪೯
(ಲೋಕಮತ)

೭ ನಿಜಸ್ವರಾಜ್ಯ ಹುಟ್ಟು

ಕಟ್ಟು, ಕಟ್ಟು
ನಾಡ ಕಟ್ಟು
ಲೋಕಹಿತಕೆ
ಹೊಟ್ಟೆಗಟ್ಟು ||
ನೀತಿ ನಿಯಮ
  ಗಳನು ತೊಟ್ಟು
ಜಾತಿ ಮತದ
  ಮದವ ಸುಟ್ಟು
ಸ್ವಾತಂತ್ರ್ಯದ
  ಸಮಭಾವದ
ಭದ್ರವಾದ ತಳಗಟ್ಟು
ಅದರ ಮೇಲೆ
ಲೋಕಹಿತವ
ಪ್ರಜ್ವಲಿಪ ಕಿರೀಟವಿಟ್ಟು
  ಕಟ್ಟು ಕಟ್ಟು
  ನಾಡಕಟ್ಟು ||

ಸವಿದೆವೊಂದು ವರುಷ
ಸ್ವಾತಂತ್ರ್ಯದ ಹರುಷ!
ಜಡಸಲೊಡಲ

ದನಿ ಹಿಂತೆ
ನಾಡನೆಲ್ಲ ಸುತ್ತಿತು!
ಬಡಗಿನ ಕಿಡಿ
ಸಿಡಿದು ತೆಂಕ
ನಾಡನೆಲ್ಲ ಮುಟ್ಟಿತು!
ಕುರಿಯುವೇಷ
ದಿಂದ ತೋಳ
ಕುರಿಮಂದೆಯ ಮುತ್ತಿತು!
ಸಿರಿಸಂತರ
ಸ್ವಾರ್ಥಿಗಳ
ಘೂರ್ಣತ್ವ ಸೋತ್ತಿತು!
ಮುಖ್ಯದ್ವರ
ದುರ್ಮಂತ್ರರ
ನಿರ್ಭಿಡೆಯಿಂ ಕುಟ್ಟು!
ಸತ್ಯ ಶಾಂತಿ ಸೌಂದರ್ಯದ
ಹೊಸ ನಾಡನೆ ಕಟ್ಟು!
ನಿಜ ಸ್ವರಾಜ್ಯ ಮುಟ್ಟು ||

೧೫ ೮ ೧೯೪೭
(ಪ್ರೋಕಸುತ)

೮ ಪಂಜಾಬ--ಕಾಶ್ಮೀರ *

೧

ಪಂಚ ನದೀ ಜಲ
ಸಿಂಚಿತ ಭೂತಲ
ರಕ್ತಾರುಣ ರಣರಂಗ!
ವೈರಿ ಕರಾಹತ
ಏನವ್ಯಾಹತ!
ಭಾರತಮಾತೆ ಶಿರೋಭಂಗ!

೨

ಗಣ್ಯ ಹಿಮಾಚಲ
ಪುಣ್ಯ ನಗಸ್ಥಲ-
ಕಾಶ್ಮೀರವನರಿ ದಹಿಸೆ,
ಸುತ್ತಲು ಹಬ್ಬಿದ
ದುಷ್ಕರ ದಬ್ಬದ
ಬಾಳಿದನಾವನೊ ಸಹಿಸೆ?

೩೦-೧೦-೧೯೪೭
(ನವಯುಗ)

* ಪಾಕಿಸ್ತಾನೀ ಸೈನ್ಯವು ಕಾಶ್ಮೀರ ನುಗ್ಗಿದ ಸುದ್ದಿ ಬಂದೊಡನೆ ಬರೆದದ್ದು.

ವಿಶ್ವಶಾಂತಿ !

ವಿಶ್ವಶಾಂತಿ! ವಿಶ್ವಶಾಂತಿ!
ಏನಿದೆಂಥ ಭ್ರಾಂತಿ!!

ಬೆಳಗಾಯಿತು, ಬೆಳಗಾಯಿತು...
ಮನೆಯ ಕಿಟಕಿ ಬಾಗಿಲಿಂದ—
ಸೂರ್ಯಕಿರಣದಂದದಿಂದ—
ದಿನದ ವೃತ್ತಪತ್ರ ಬಂದು
ಮೇಜಿನ ಮೇಲೆಸೆದುದಿಂದು!

ಬಾರೊ ಗೆಳೆಯ, ಸುದ್ದಿಬೆಳೆಯ—
ಸುಖದುಃಖದ ಮಿಶ್ರಕಲೆಯ—
ತೋರು, ಬೀರು ಎಂದು ತೆರೆದೆ,
ಅಕ್ಕರದೊಳಮನೆಗೆ ಸರಿದೆ....
ಬೆಂಕಿ! ಬೆಂಕಿ! ಬೆಂಕಿ ಸುತ್ತ!
ದಂಭಾಹಂಕಾರಮತ್ತ
ಜನರ ನುಡಿಯು ಕಿಡಿಯು ಪೊತ್ತ
ಅಕ್ಕರವೈಪೆತ್ತುದಿತ್ತ!
ಕೋಟಿ ಕೋಟಿ ಹಣವ ಸುರಿದು,
ಮಾನವರೈಕ್ಯವನೆ ಮುರಿದು,
ಪಶುಲೋಕವ ಸೃಜಿಸಲೆಂದು,

ಮುಷ್ಟಿ ಗುಂಡುಗಳನು ಹಂಚಿ
ರಾಶಿಯೊಟ್ಟಿ ಕೂತಿರುವನು
ರಶಿಯದ ಸರ್ವಾಧಿಕಾರಿ!
ಅವನ ಮುಂದೆ [ಭೂಮಿ ಛಿದ್ರ-
ನೊಳಗೆ!] ಹೊರಗೆ. ಹೂಂಕರಿಸುತ,
ತೊಡೆಯ ತಟ್ಟಿ ಕೂತ ಜಟ್ಟಿ
ಅಮೆರಿಕ ಲೋಕೋಪಕಾರಿ!
ಏನು ಜತೆ! ಎಂಥಕಥೆ!
ಲೋಕಕಾಯ್ತುದೆಂಥ ವ್ಯಥೆ!!
ಕೊರಿಯವೆಂಬ ಮೂಡುಕರೆಯ
ಕಿರಿಯ ನಾಡೊಳಿಟ್ಟುರುರಿಯ:
ಹೊತ್ತಿಸಿದರು, ಮುತ್ತಿಸಿದರು.
ಜಗಳವ ಜೆಂಬತ್ತಿಸಿದರು!

ಒಂದೆ ತಾಯ ಮಕ್ಕಳಲ್ಲಿ.
ಒಂದೆ ಮನೆಯ ಒಕ್ಕಲಲ್ಲಿ.
[ಧನಿಕ ಜನರ ಬೆನ್ನತಟ್ಟಿ
ಬಡವರನ್ನು ಮೂಲೆಗೊಟ್ಟಿ]
ಪಿಸುಣನಾಡಿ, ವಿಷವನೂಡಿ,
ಶಾಂತಿಸುಟುವ ಹೊರಗೆ ದೂಡಿ.
ದೂಡಿಸಿದರು ಸಮರವ.

ಹಬ್ಬಿಸಿದರು ರೌರವ !
ದೂರ ಸಾಗರೋತ್ತರದಲಿ,
ಗುಂಡು ತಾಗದೆತ್ತರದಲಿ,
ಗಂಡುಗಲಿಗಳಿವರು ಕೂತು,
ಜಗದ ಶಾಂತಿ ವೃಕ್ಷಹೂತು,
ಫಲಿಸಲೆಂದು ತುಟಿಯ ತೆರೆದು,
ಮಾತಿನ ಮಳೆನೀರನೆರೆದು,
ಗಹಗಹಿಸುತ ನಗುವರು!
ಒಳಗೊಳಗೇ ಹೊಗೆವರು!

ಏನು ಕೋಪ, ಎಂಥ ತಾಪ!
ಮನುಜಲೋಕಕೆಂಥ ಶಾಪ!
ಎಂಥ ಉಚ್ಚ ಸಂಸ್ಕೃತಿ
ಮಸಣ ಗೈಯುವೀ ಕೃತಿ!!
ಜೀವಸೃಷ್ಟಿ ಸುಡುವ ಗುಂಡು,
ಪ್ರಳಯಾಗ್ನಿಯ ದೊಡ್ಡ ದಂಡು,
ಅದೋ! ಬರುತಲಿರುವುದು!
ವಿಶ್ವಶಾಂತಿ ಇವರದು!

* ಕೊರಿಯಾ ಆಕ್ರಮಣದ ಸುದ್ದಿ ಬಂದೊಡನೆ ಬರೆದದ್ದು.

೧೩—೭—೧೯೫೦
(ಕರ್ಮವೀರ)

೧೦ ಕಾಸರಗೋಡಿನ ವೀರಕಂಕಣ *

ಉ॥ ತೆಂಕಣ ನಾಡ ಬೀಡ ಕಡಲಾಡುವ ಕಾಸರಗೋಡ ಕೋಟೆ ನಿ-
ಶ್ಶಂಕೆಯನಿಂದು ಕನ್ನಡದ ವೀರ ವಿತಾನಕೆ ವೀರ ಕಂಕಣಂ ॥
ಬಂಕದಿ ಬೀಗಿ ಕಟ್ಟಿದುದು ಮೆಟ್ಟಲರಾತಿಯ ಸೈನ್ಯ ಸಾಹಸಂ ।
ಕಿಂಕರರೆಲ್ಲರೆಳ್ಪು ಬಗೆಯೊಲ್ಪು ನಿಮಿರ್ಚುಗೆ ಕಾರ್ಯಸಾಧನಂ! ॥

ಕೂಡದ ಕೂಟವಿಲ್ಲ, ನೆರೆ ಮಾಡದ ಮಾಟಮದಿಲ್ಲ, ಕನ್ನಡಂ ।
ಕೇಡಿಗರೀಡಿಸಲ್, ಪಿಸುಣರಾಡಿಸಲುಂ, ಸಲೆ ಕೈತವಂಗಳಿಂ ॥
ದೂಡಿಸಲುಂ, ಕವಲ್ಗೊಳಿಸಲುಂ ಪಥ ನಿಶ್ಚಳಿತಂ, ವ್ರತಂ ದೃಢಂ ।
ನಾಡಿಗಿದೇಳ್ಗೆ ನೇರ್ಪಡೆಯು ತಾಳ್ಗಿಮ ಕನ್ನಡತಾಯಿ ನಿಚ್ಚಟಂ! ॥

ಕನ್ನಡ ನಾಡ ಕಟ್ಟಿ ನಡುಗಟ್ಟಿದ ಜಟ್ಟಿಗರೆಲ್ಲ ರೊಟ್ಟನಿಂ-।
ದಿನ್ನಿದೊ ಕೂಡೆ, ನಾಡೆ ನೆರೆ ಸಖ್ಯ ಸಮುಜ್ವಳ ಭ್ರಾತೃಭಾವದಿಂ ॥
ಮುನ್ನಿನ ಮಾರ್ಗ ದುರ್ಗಮಮುದಾರ್ಗಮಸಾಧ್ಯಮದೆಂದು
ಶಂಕೆಗುಂ-
ತಿನ್ನು ಮನಸ್ತಮಂ ಬಡದೆ ಮುನ್ನಡೆ, ಗೆಲ್ಲಮೆ ನಾಳ್ಗೆನಿಶ್ಚಿತಂ! ॥

ಚಂ॥ ಇನನುದಯಿಪ್ಪ ಮುನ್ನಮೆ ದಿಶಾವಳಯಂಗಳ ನುಣ್ಮೆ ಪೊಣ್ಮೆ ಕೆಂ- ।
ಪಿನ ಕಿರಣಾಳಿಯಿಂದುಷೆ ಯಿಳಾತಳಮಂ ನವಜೀವಭಾವದಿಂ- ॥
ಪಿನಮೃದು ಗಾನ ತಾನ ಸುಧೆಯಿಂದೆದೆಯುಳ್ಕತೆ ಪಾಡೆ ಪಕ್ಕಿಗಳ್ ।
ಮನಮನದಿಂತು ತೀವೆ ನುಡಿಯೊಳ್ ನಡೆಗೊಂಡುದು ನಾಡ
ನಲ್ಮೆಯಿಂ ॥

* ೨೮-೧೨-೧೯೪೭ರಲ್ಲಿ ಕಾಸರಗೋಡಿನಲ್ಲಿ ಕೂಡಿದ ಏಕೀಕರಣ ಸಂಸತ್ತಿನಲ್ಲಿ ಎಂ. ಎಲ್. ಎ. ಗಳು ಪ್ರಾಂತೀಕರಣಕ್ಕಾಗಿ ರಾಜನಾಮೆ ಇತ್ತು ಸತ್ಯಾಗ್ರಹ ಹೂಡಲು ಸಿದ್ಧರಾಗಬೇಕೆಂದು ಮಾಡಲ್ಪಟ್ಟ ಠರಾವಿಗೆ ಅನ್ವಯಿಸಿ— (ನವಯುಗ)

೧೧ ಕೀರ್ತಿಕಾಯ ಅಮರಗಾಂಧಿ *

೮೨| ಸಂದನೆ ಭಾರತಪ್ರಜ ಪುರೋಹಿತ ನಿರ್ಮಲಚಿತ್ತ ಸತ್ಕ್ರಿಯಾ-
ನಂದಿ, ಸುಗಂಧಿ, ವಂದ್ಯ, ಸಕಳೋರ್ವಿಯಪರ್ವಿದ ಸತ್ಯಕೇತನಂ! ||
ಸಂದನೆ ದೀನ ಮಾನಿಸರ ಕಲ್ಪಕುಜಂ, ದಳಿತಾಬ್ಜ ಭಾಸ್ಕರಂ
ನಿಂದಕ ಸ್ಪಂದಕಂ ಮುಳಿಯದೆಲ್ಲರ ದೊಳ್ಜಸಗೊಂಡ ನಿರ್ಮಲಂ ! ||

೮೩| ದೇಶಕಂತಕಂಗಳಿಂದೆ ಪರರಾಳ್ಕೆಗೆ ಸಂದಿಹ ಸ್ವರ್ಣಭೂಮಿಯಂ
ವಿಶಸನಕೊಡ್ಡದೊಡ್ಡಳಿಸಿ ವೈರಿಯ ನನ್ನಿಯ ನಲ್ಮೆಗಾಳಿಗಂ ||
ಪ್ರೇಸತೆನೆ ಧಾತ್ರಿಗೆಂಬೊಲೆಸೆದಂ ಜಿಸೆದಂ ವಸುಧೈವ ಸ್ವೈತ್ರಿಯ-
ನ್ನಸವ್ಯಕಮೂರ್ತಿ ಕೀರ್ತಿ ಪರಿಕೀರ್ತಿತ ಗಾಂಧಿ ಸುಗಂಧಿ ಸದ್ಗುಣಂ! ||

೮೪|| ವಜ್ರ|| ವಕ್ತ್ರೇಸುಹಾಸಃ ನಯನೇಪ್ರಕಾಶಃ
ಲೋಕೇಸುಕೀರ್ತಿರ್ಕಿರಣಾನುಲೋಕಃ ||
ಪ್ರೇಮಾಸುಗಂಧಃ ಹೃದಯಾರವಿಂದಃ
ಭಾಸ್ವದ್ರವಿರ್ಗಾಂಧಿ ಭರತಾಭ್ರಗಾಮೀ ! ||

* ಗಾಂಧಿಯವರ ಕೊಲೆಯಸುದ್ದಿ ಬಂದೊಡನೆ ಬರೆದದ್ದು.

೩೧-೧-೧೯೪೮
(ನವಯುಗ ಹುಬ್ಬಳ್ಳಿ)

೧೨ ನವಭಾರತದ ವೀಥಿ, ಜ್ಯೋತಿ! *

೧

ಗಾಂಧಿ ನೀನೆ ವೀಥಿ, ಜ್ಯೋತಿ
ಸತ್ಯ, ಸಮತೆ ನೀತಿ
ಪರಿಪಾಲಿಸಿದ ಪ್ರೀತಿ ||
ಸತ್ಯಾಗ್ರಹ ಸಮರ ರೀತಿ
ಅರಿಗಳಿದೆಗೆ ಭೀತಿ,
ಭರತಾಂಬೆಗೆ ಖ್ಯಾತಿ ||

೨

ದಾಸ್ಯನಿಶಾಪಾನಮತ್ತ
ಜನಾರಣ್ಯ ಹೊತ್ತ
ಕಾರ್ಮೋಡದಮುತ್ತ
ನಿನ್ನ ಚಕ್ರ ತಿರುಗಿತತ್ತ–
ಮಿರಿಮಿಂಚಿನ ಮೊತ್ತ!
ಸುಖಶಾಂತಿಯು
ನವಕಾಂತಿಯು
ನವಭಾರತದತ್ತ.

* ಗಾಂಧಿಜಿಯವರ ೭೮ನೇ ಜನ್ಮದಿನಕ್ಕೆ ಅರ್ಪಿಸಿಪ್ಪು.

೩–೧೦–೧೯೪೭
(ಲೋಕಮತ)

....೭೦೭....

೧೩. ರಾಷ್ಟ್ರಪಿತ ತರ್ಪಣ :

(ರಾಗ: ಭೂಪಾಳಿ)

ತಿಲತರ್ಪಣ ನಿನಗರ್ಪಣ
ಭರತಾರ್ಪಣ ಜೀವಾ!
ಸ್ವಾತಂತ್ರ್ಯದ ಮಣಿದರ್ಪಣ
ಮಾನವರೊಳು ಜೀವಾ!

ಸಬಮತಿಂದು ಪರುಷಪ್ರೊಂದು
ದೀನದಯಾಸಿಂಧು
ಮರೆಯಾಗುತ ಕರೆಯಾಗುತ
ಸ್ವರ್ಗಸಿರಿಗೆ ಸಂದು!

ಕೋಟಿ ಕೋಟಿ ಜನರೆದೆಗದೊ
ಸಿಡಿಲೆರಗಿತು ಬಂದು
ಕೊಲೆಗಡುಕನ ಕಡುಸಿಡುಕಿನ
ದುಷ್ಕೃತ್ಯದೊಳಂದು!

ಜನಮನ ಪೌನಾಂಗಣದಲಿ
ತುಂಬಿದ ಹಿರಿ ಬೆಳಕೆ!
ಎಂದೆಂದಿಗೂ ಕಿರಿದಾಗದ
ನೆಲೆಬಾಳಿನ ಹೊಳಕೆ!

ಕುಲತರ್ಪಣ, ನಿಜಗರ್ಪಣ
ಭರತಾರ್ಪಣ ಗಾಂಧಿ !
ಸದ್ಗುಣಗಣ ಮಣಿದರ್ಪಣ
ಸತ್ಯಸುಮಸುಗಂಧಿ !

❁ ಮಹಾತ್ಮರ ಪ್ರಥಮ ಪುಣ್ಯತಿಥಿಗೆ ಬರೆದದ್ದು.
೩೧-೧-೧೯೪೯
(ಲೋಕಮತ)

ಇಲ್ಲಿ--ಅಲ್ಲಿ ❁

ಇಲ್ಲುಲಿವ ಕೋಗಿಲೆಯ ಗಾನ ಕಿಂಚರವಿಲ್ಲ!
ಇಲ್ಲಿಸೆವನೇಹಕಾನಂದದಂಚಿಲ್ಲ–
ಇಲ್ಲಿ ನೀರವತೆಯಲಿ ಗಾಂಭೀರ್ಯವೊಸರಿಲ್ಲ!
ಇಲ್ಲಿರುವುದೆಲ್ಲ ಬೊಬ್ಬುಳಿಯ ಬಾಳುವೆಯೆ !

ಅಲ್ಲಿ ಕಾಂತಾರದ ನಿತಾಂತನೀರವತೆಯಲಿ
ಮಲ್ಲಿಗೆಯ ಮೊಗ್ಗೆಗಳ ಮಧುರ ಮೌನದಲಿ–
ಪರತತ್ವವೊಂದು ನಗ್ನತೆಯ ಸೌಂದರ್ಯದಲಿ
ಪರಮಾತ್ಮನೊಂದು ಪಡಿನೆಳಲ ಪರಿಕಿಸುವೆಂ

❁ ಕಥಾಂಜಲಿ– ೧೯೨೯–ನವಂಬರ
ಬೆಂಗಳೂರು

೧೪ ಶ್ರೀ ಅರವಿಂದಾರ್ಪಣಮಸ್ತು ❁

ಕಂ|| ತ್ರಿಭುವನ ಮಂಗಳ ತೇಜೋ
ವಿಭವಂ ಸ್ವರ್ಗೀಯ ಶಾಂತಭಾವಾನಂದಂ ||
ವಿಭು, ಯೋಗಪ್ರಭು, ವೀರ್ಯ—
ಪ್ರಭ ಪಾತಂಜಲಿಯೆ ನಮ್ಮ ಗುರ್ವರವಿಂದಂ ||

ಸ್ವರ್ಣಲತೆಯೊಲಿದೊ ಅಂತ್ರಮಾಲೆಯುದು
ವಜ್ರತರುವಿಗೊಲಿಯೆ
ವರ್ಣಮೂಲ ಸಹಸ್ರ ಪದ್ಮದಳ
ದಮೃತದೀಪ್ತಿ ಹೊಳೆಯೆ ||

ಪೂರ್ವತೀರದಲಿ ಪಾಂಡಿಚೇರಿಯಲಿ
ಕುಳಿತ ಸಿದ್ಧಪುರುಷ
ತೋರ್ವ ತಂತ್ರವಿದು ಮೌನ ಮಂತ್ರವಿದು,
ಇದುವೆ ನಿತ್ಯ ಹರುಷ !

ವೀರ್ಯಧಾರಣವು ಸರ್ವಕಾರಣವು
ಅದುವೆ ಬಾಳಮರ್ಮ
ಸೂರ್ಯಚಂದ್ರ ಗ್ರಹ ಕೋಟಿತಾರೆ ಸಹ
ಅದರ ದಿವ್ಯಕರ್ಮ

೨೪–೧೧–೧೯೪೭ ❁ ದರ್ಶನದದಿನ ಬರೆದದ್ದು.
(ನವಯುಗ)

೧೫ ನಗ್ನ ನಿಸರ್ಗ

ಮೇಲ್ಹಾಸ, ಕೆಳಗಡಲು, ಪ್ರಕೃತಿ ತೊಡೆಯುಡಿಲ
ನೋಡು ಕಣ್ಮುಸುಕದೀ ನಗ್ನವಾದೊಡಲ!
ಅಳಿಸಿಲ್ಲವೊಂದು ಸೊಬಗಿನ ಪಟವಿದಲ್ತೆ!
ತಳತಳಿಪ ಕಳೆ ಇದರೊಳದು ಸತ್ಯವಲ್ತೆ!
ಸತ್ಯಲೋಕದ ಕನಸೆ ಸೌಂದರ್ಯಮೊರತೆ,
ಸತ್ಯವಿರ್ಪನ್ನೆಗದ ಕಿರ್ಪುದೇಂ ಕೊರತೆ?
ಆದಿಶಕ್ತಿಯು ಕನಸೆ ಮಾಯೆಯೆಂದಾಯ್ತು,
ಶಕ್ತಿಕುಟ್ಮಲ ವಿಕಾಸವೆ ಸೃಷ್ಟಿಯಾಯ್ತು!
ಸೃಷ್ಟಿಯಿದು ಸೌಂದರ್ಯಸಾರವೆಂದರಿಯೆ,
ಸೃಷ್ಟಿ ಶಕ್ತಿಸ್ಫುರಣ ಮೆಂಬುದಂ ಮರೆಯೆ!

೧೬ ಅರವಿಂದರ ಮೌನಯೋಗ

ಕೋಟಿ ಕೋಟಿ ಗ್ರಹಮಂಡಲ
ಬ್ರಹ್ಮಾಂಡದ ಬಸಿರಲಿ
ಕೋಟಿಕಲ್ಪ ಕಾಲವಲ್ಪ
ಕಾಲದೊಂದೆ ಉಸಿರಲಿ!

ಕಾಲವೆ ಕಣ್ಣಾಗಿಕಾಂಬ
ವಿಶ್ವರೂಪ ದೈವಕೆಂಬ
ನಿನ್ನೊಳಗೇ ಬ್ರಹ್ಮಾಂಡ—
ಅದುವೆ ಅಮೃತ ಪಿಂಡಾಂಡ!!

ಲೋಕಜನಕೆ ಮಾತು ಹಗಲು
ಅದರೊಳವರಿಗೆಚ್ಚರ!
ಮೌನ ಹಗಲು ಮಾತು ಇರುಳು
ಸಂಯಮಿ ನಿನ್ನುತ್ತರ!
ದಿವ್ಯಲೋಕದಮರಗೀತ
ದೇಹಧರಿಸಿ ನಿಂದವ್ರತ—
ಸರ್ವಭೂತಹಿತೇರತ
ಅರವಿಂದರ ಮೌನಪಥ!

೪-೧೦-೧೯೫೦

ಹುಬ್ಬಳ್ಳಿ ಅರವಿಂದ ಮಂಡಳದವರ "ಸಮರ್ಪಣ" ಗ್ರಂಥಕ್ಕೆ ಬರೆದುಕೊಟ್ಟದ್ದು.

....:೦:....:೦:....

೧೭ ದೀಪಾವಳಿ *

ಶುಭಾಶಯ!

ಕಂದ|| ಇದೊ ಬಂದುದು ದೀಪಾವಳಿ-
ಇದು ಸಂಪಲ್ಲಕ್ಷ್ಮಿಯುಕ್ತಿಲಕ್ಷ್ಮ್ಯಂ-
ಕುರಗಳ್ ||
ಮೃದು ಮಧುರಸ್ವನ ಸುಂದರ
ಸದನಂಗಳ್ ಮುದದಿನಿದಿರುಗೊಳ್ಗೆ
ಜನಂಗಳ್ ||

ಚಿನ್ನದಬೆಳೆ ಬೆಳೆದತ್ತಿನೆ
ಕನ್ನಡ ತಾಯ್ ನಕ್ಕನಗೆಯ
ರದನ ದ್ಯುತಿಯೊಲ್ ||
ಚೆನ್ನಾಯ್ತು ನಾಡುಬೆಳಕಿಂ
ದಿನ್ನೆತ್ತಣ ದಾಸ್ಯತಮವು?
ಜ್ಯೋತಿರ್ಲೋಕಂ ||
"ನವಯುಗ" ದೀ ನವಜನಕಿದೊ
ನವಭಾವಂ ಸ್ಫೂರ್ತಿಕೀರ್ತಿ
ನಿತ್ಯೋತ್ಸವಮಂ ||
ಶಿವನೀಯಲಿ, ಶಿವಕಾಯಲಿ!
ನವಜೀವನ ನಾಡನೆಲ್ಲ
ತುಂಬಲಿ ಸತತಂ ||

* "ನವಯುಗ" ದಿನಪತ್ರಿಕೆ ವಾಚಕರ್ಗಿತ್ತ
೧೩–೧೦–೧೯೪೮

೧೮ ಸರೋಜಿನಿ ದೇವಿ

ಕೆಂದಾವರೆ ದಳದ ಪತ್ರ
ತೀದ ವರ್ಣಲಿಪ್ತಯುಕ್ತ —
ಕವಿತಾಂಬುಧಿ ಕಡೆದು ತಂದ
ಸೌಂದರ್ಯದ ಸತ್ಯಬಂಧ
ಸ್ವೈಚ್ಛ್ಯದೊಳಡಗಿ ನಿಂತ
ಸಕತೆಯೂ ದಿವ್ಯ ಗಂಧ —
ಭುವಿಯ ದಿವಿಯುಗ್ಮದ ಕವಿ
ದುಃಖಾದ್ರಿಯ ತರಿದ ಸವಿ —
ಸರೋಜಿನಿ, ಸರೋಜಿನಿ
ದಿವ್ಯಕಾವ್ಯ ಯೋಗಿನಿ —
ಗಾಂಧಿ ಅಸ್ತಮಿಸಲು ಬಾಡಿ
ಹೋದ ನಿಜ ಸರೋಜಿನಿ ||

೨-೩-೧೯೪೯
(ಶೋಕನುತ)

೧೯ ಕವಿ ಕೋಕಿಲ ಸಾಲಿ!

(ಷಷ್ಟ್ಯಬ್ದ ನಿಮಿತ್ತ)

೧

ಕೀರ್ತಿ ಘೇರು
ಕವಿಗಳಾರು
ನಿನ್ನಯುವ್ರೊಲು ತಂದೆ?
ಅರುವತ್ತರ, ನಿನ್ನೆತ್ತರ
ಕಿಡೊ ಪ್ರಾಜೆಯುತಂದೆ ||

೨

ಕನ್ನಡ ಕುಲ
ಕವಿಕೋಕಿಲ—
ಹಳೆಗನ್ನಡ ಶೋಲ!
ಲಲಿತಪದ, ಪ್ರಸನ್ನ ಶೀಲ!
ನಿನ್ನೆಡೆ ಸುವಿಶಾಲ ||

೩

ಮನ ಪಾವನ
ತನು ಪಾವನ
ಧರ್ಮ, ಭಕ್ತಿ, ಜ್ಞಾನ
ವಿರತಿ ಭರಿತ ನಿನ್ನ ಚರಿತ
ಪ್ರೇಮಸುಧಾಖ್ಯಾನ ||

೪

ಕೊಡಗಿನವುಲ
ಗಿರಿಯ ತುಮುಲ
ಕಂಡೇನೆದೆ ಹಿಗ್ಗಿ

ಉಗ್ಗಡಿಸಿದ ಪದದ ಸುಗ್ಗಿ
ಗಿದೊ ನಮಿಸುವೆ ಬಗ್ಗಿ!

ಶಾಸ್ತ್ರಿ ರಾಮಚಂದ್ರರಾಯರ ೬೦ನೇ ಜನ್ಮದಿನಕ್ಕೆ ಬರೆದದ್ದು.
(ನವಯುಗ)
೧೨-೧೨-೧೯೪೭

—೦—

ಸಂಶಯ

ಸಂಶಯದ ಕತ್ತಲಲಿ
ಎದೆ ಮುದುಡಿ ಕೊಂಡೊಡೇಂ!
ತುಂಬಿರದೆ ಒಳಗೆ ಪರಿಮಳವು?
ನಂಬಿಗೆಯ ರವಿಬಿಂಬ
ಚುಂಬಿಸಲ್ಕೆದೆ ಮುಗುಳು
ಅರಳಿ ರಸಗರೆವುದವಿರಳವು ||

ಪ್ರೇಮ

ಪ್ರೇಮವೆಂಬುವ ಜ್ಯೋತಿ
ಕುಂದದಂತೆರೆಸ್ನೇಹ
ಬೆಳಗದೇನಿಹುದೆ ಬಾಳ್ಮನೆಯು?
ಪ್ರೇಮವದು ನಿಸ್ವಾರ್ಥ,
ಕಾಮ ಹೇಯ ಸ್ವಾರ್ಥ,
ಪ್ರೇಮ ಪರಮಾರ್ಥ ಜ್ಞಾನಾಮೃತದ
ಕೆನೆಯು ||

೧೯೩೦ ಮೇ (ಜೀವನ)

೨೦ ಹೊಸಗನ್ನಡದ ಪಂಪ-ಅಮರ "ಶ್ರೀ"

ಪತ್ತು ಶತಕಂಗಳುರುಳಿದೊಡೇಂ ಕನ್ನಡಕೆ
ಪಂಪನಿಂದಿಗುಮೊಂದೆ ಪೆಸ್ರರಂ, ಗಣ್ಯಂ!
ನೂರಾರು ನುಡಿಭಕ್ತರಡಿಯಿಟ್ಟೊಡೇಂ, ಸೀಮೆ
ಸಮೆದ ಪೆದ್ದಾರಿ—ಹೊಸಗನ್ನಡದ ಪುಣ್ಯಂ ।

ಸಕ್ಕದದೊಳುಕ್ಕದಿಹ ಆಂಗ್ಲರಸಭಾವಗಳ
ಕನ್ನಡದ ಕಿರಿಯರಿಡಿಗೆರೆದು ಮೆರೆದು,
ಪೂರ್ವ—ಪಶ್ಚಿಮ ಖಂಡಗಳ ಬಳಸಿಕೊಂಡರಸ
ಭಾವಾನುಭವಶರಧಿ ಯೊಂದೆಯೆಂದೊರೆದು,

ಶ್ರೀಕಲಾವಣ್ಯ ವಿಸ್ತರಣಭರಣಕೆ ರವಿಯೆ
ಮೂಲಮೆಂಬಾರ್ಯ ಮಂತ್ರವ ಮರುಚ್ಚರಿಸಿ,
ಶೋಕ ಕಾರ್ಪಣ್ಯಹವಿ ಹೋಮಿಪಗ್ನಿಜ್ವಲಿಯೆ
ಸಂಯಮಾರಣಿ ಸುಪ್ತಮೆನುತಲೆಚ್ಚರಿಸಿ,

ಇಂದಿರ್ಪ ಕನ್ನಡಕ್ಕಾದೆ ನೀಂ ಪಂಪ,
ಸಂಪುಮ ಸದೇಹಿಸಿದೊಲಿಸಿದೆಂಪ್ರಿ ಪೆಂಪ!

೧೨–೧೧–೧೯೫೦
(ಮಿಡಾಲಕರ್ನಾಟಕ)

೨೧ ಬೆಳಕಿನ ಕವಿ ಶ್ರೀ ಬೇಂದ್ರೆ

೧

ಕಿವಿದುಂಬಿತು
ನಿನ್ನನಾದ
ಎದೆದುಂಬಿತು
ಅದರ ಬೋಧ
ಕಣ್ಮುಚ್ಚುತ ಕಂಡೆ
ಎಂಥ ಮಿಂಚಿನುಂಡೆ !

ಅನುಭಾವವೆ
ವೈತಳೆಯಿತೊ !
ಕಲ್ಪನೆ ವಿ-
ಶ್ವವನಳೆಯಿತೊ !
ನಿನ್ನೀ ಕವಿಭಾವ
ದಿನವೂ ನವಜೀವ !

ಯೋಗ ಮೌನ
ಕಣ್ತೆರೆಯಿತು,
ಭಾವಪದ್ಮ
ದಳಬಿರಿಯಿತು,
ಸತ್ಯಗಂಧ ಹಬ್ಬಿತು
ಸುಖಾನಂದ ಉಬ್ಬಿತು !

೬

ಕನ್ನಡ ನುಡಿ
ಪುಣ್ಯ ನಿನ್ನ
ತಾಯ ರೂಪ
ತೊಟ್ಟಿತೊ
ನಿನಗೆ ಕಾಯ
ಕೊಟ್ಟಿತೊ?

ನುಡಿಯ ಮಿಡಿಸು
ಕೀರ್ತಿನಡೆಸು
ಕತ್ತಲೆಯನು
ಕಟ್ಟಿದೆ
ಬೆಳಕಿ ನಡಿಸು
ಮುಟ್ಟಿದೆ!

ಹಿರಿಯ ಮಾಸ್ತಿ
ಬೀರಿದ ಸ್ಫೂರ್ತಿ
ನೂರುಗಾಲಕು ಸತ್ಯ!
ಬೆಳಕಿನ ಪ್ಲೊ
ಗುಂಟೆ ನೆರಳು?
ಅದರೊಳಿಲ್ಲ ನಿತ್ಯ!
ಮೌನ ಕರಗಿ
ನಾದವಾಯ್ತು

ಭಾವದ ವೈ
ಮಿಂಚಿ ಹೋಯ್ತು,

ಸುಡಿಯ ಕೆಲಸ
ವಜ್ರಕಲಶ
ಇದರಿನಮೃತ
ಸಿಂಚನ
ಇವರೊಳ್ಳಿ
ವಂಚನ !

೨೭-೩-೧೯೫೦
(ವಿಶಾಲಕರ್ನಾಟಕ)

೨೨ ರಾಮಾಯಣ ದರ್ಶನಕ್ಕೆ *

೧

ಬನ್ನಿರಿ ಬನ್ನಿರಿ
ಪೂಜೆಯ ತನ್ನಿರಿ
ಕನ್ನಡ ಕವಿಕುಲ ಮಣಿಗೆ
ನವಕನ್ನಡ ಶುಭದಿನಮಣಿಗೆ ॥ ಪಲ್ಲ ॥

ಕವಿ ಕಲ್ಪನೆಗಳ
ಫಲ ಕಲ್ಪದ್ರುಮ
ಬುವಿಗಿಳಿದಿದೆ ಬ್ರ-
ಹ್ಮಾನಂದದ ಸುಮ-
ಕವಿ ಪುಟ್ಟಪ್ಪನ
ಈ ರಾಮಾಯಣ
ನವಕಲ್ಪನೆಗಳ
ಅಮೃತ ರಸಾಯನ

ಪುಟ ಪುಟದಲಿ ಪು
ಟ್ಟಿದೆ ಬಂಗಾರ
ಪುಟಿದಿದೆ ಪರಿಮಳಿ-
ಸುತೆ ಸಿಂಗಾರ;
ದಿವ್ಯ ಜ್ಞಾನದ
ಸ್ವಚ್ಛ ಸಮೀರ
ನವ್ಯತೆಗಿದು ನವ-
ಚೇತನ ಸಾರ .

೭

ಪವಿತ್ರರಸೇಂ ಚಿತ್ರರ
ಈ ಸುಕಾವ್ಯಸಾಗರ
ಸರ್ವ ರಸಕಿದಾಗರ ॥ ಪ ॥
ಸರ್ವಾಲಂಕಾರಭರಿತ
ಗರ್ವಿತರೆದೆಗೆಂಥ ಇರಿತ !
ರಾಮಚರಿತ ಪುಣ್ಯ ಸರಿತ
ಸುಟ್ಟಿರುಹಿತು ದುರಿತ ॥ ೧ ॥
ಮುತ್ತು, ಹವಳ, ಕೆಂಪು ಹಳದಿ
ಹೀರಕ ವೈಡೂರ್ಯ ತಳದಿ
ಝಗಝಗಿಸಿದೆ, ಜಗೆ ನಗಿಸಿದೆ
ವಾಗೀಶ್ವರಿ ವೈಭವ ॥ ೨ ॥
ಕವಿತೆಯು ಝರಿ ಕಾದಂಬರಿ
ನದಿಯಾಗುತೆ ಹರಿದು ।
ಆರ್ಯ ದಸ್ಯು ವೈರದುರಿಯು
ನದಿಪಿ ಜಗದಿ ಮೆರೆದು ॥
ಕನ್ನಡಕವಿ ಜಗತ್ಕವಿ
ಎಂಬ ಕೀರ್ತಿ ತುಂಬಿ ಸ್ಫೂರ್ತಿ
ಬೆಳಗಲಿ ಕವಿಮೂರ್ತಿ
ಪುಟ್ಟಪ್ಪನ ಕೀರ್ತಿ ॥ ೩ ॥

ಈ ಮಹಾಕವಿ ಪುಟ್ಟಪ್ಪನವರು ರಚಿಸಿರುವ ರಾಮಾಯಣ ದರ್ಶನವೆಂಬ ಮಹಾಕಾವ್ಯದ ಮೊದಲ ಮಹಾಸಂಪುಟವನ್ನೋದಿ, ಪರಮಾನಂದಭರಿತನಾಗಿ ಬರೆದ ಕವಿಪೂಜಾಕವನವಿದು.

(ಬಾಲಕನಾಟಕ)

೩೦-೧೦-೧೯೪೯

೨೩ ಶ್ರೀ ಮದ್ಬಸವಾರಾಧನಂ ✿

ಉ|| ಧರ್ಮದೆಕ್ಕೈತಪಂಪೆರಸಿ ಬಾಳ್ಕೆಯ ಭಾಂಡದ ನಿರ್ಮಳೋದಕಂ
ಘರ್ಮಿಸುವಂತೆ ಗೋಳ್ಗುದಿಸೆ ಬಾಳ್ಗುದಿಸಲ್ ಕ್ರತಕರ್ಮಕಾಂಡಿಗಳ್ ||
ಧರ್ಮದ ದುರ್ಮದಂ ಕುರುಡುಗೈಯ್ಯೆ ವಿವೇಕದ ದಿವ್ಯದರ್ಶನಂ,
ಧರ್ಮದಯಾಂಜನಂ ದಯಿಯುಸಿತ್ತ ನಿರಂಜನನ್ನೈ ವೃಷಾಂಕಭೋ!||

ಅಲ್ಪರ ಜಲ್ಪನಂ, ಕವಡುಕಲ್ಪಿಯು ಕಲ್ಪವರಲ್ಪಕಲ್ಪನಂ
ಬಲ್ಪಿನ ಬಿಜ್ಜಳಂಗುಣಿಸೆ ಪೈಶುನಮಿಶ್ರಿತ ವಾಗ್ವಿನೋದನಂ, ||
ಪೆಳ್ಪಡೆದಿತ್ತು ಭಾಗ್ಯ! ಬಸವೇಶ್ವರ ಸುಜ್ಞ್ರದ ಧರ್ಮಕ್ರಾಂತಿಯುಂ!
ದೊಳ್ಪೆಸೆದತ್ತು ಕನ್ನಡಧರಿತ್ರಿಗೆ ನಾಕಮೆ ಬಿಳ್ದುದೆಂಬವೋಲ್ !

ಕನ್ನಡಿಸಿತ್ತು ನಾಡಿನಸುಭಾವಿಗಳುನ್ನತ ತತ್ವರತ್ನಮಂ
ಕನ್ನಡವಾಣಿ ನಿನ್ನ ಸಮತಾಕರುಣೈಕರಸಾನುಲಿಪ್ತಿಯಿಂ ||
ಕನ್ನಡ ಧರ್ಮದೇವಿ ಸಮದರ್ಶಿನಿಯೆಂಬುವನಾದಿ ಸತ್ಯಮಂ
ನಿನ್ನವೊಲಾರದಾಚರಿಸಿದರ್ದಯೆದೇಹವನಾಂತು ನಿಂತೆ, ಭೋ! ||

ಚಂ|| ಜಯಜಯ ಪುಣ್ಯಕೀರ್ತಿ, ಜಯಕೈವ ಸುಧಾರ್ಣವತೀರವರ್ತಿ, ವಿ-
ಗ್ರಹಯುಕರ ಭಕ್ತಿ ಶಕ್ತಿ, ಸಮುದಗ್ರವಿರಕ್ತಿಯ ಚಕ್ರವರ್ತಿ. ನಿ- ||
ರ್ದಯಮಲ ವಿಶುದ್ಧವೃತ್ತಿ, ಶರಣಾರ್ತಿ ಜನೌಘದ ಪಾಪಹರ್ತಿ, ಚಿ-
ನ್ಮಯ, ಜಯ ಕನ್ನಡಕ್ಕಮರ ಸ್ಫೂರ್ತಿಯ ಮೂರ್ತಿವೃಷಾಂಕ
ನೀನೆ ಭೋ! ||

✿ ಹುಬ್ಬಳ್ಳಿ ನಗರಸಭಾ ಭವನದಲ್ಲಿ ಬಸವಜಯಂತಿ ನಿಮಿತ್ತ ೧೯-೪ ರಂ
ದು ಸಂಜೆ ಸಂಯುಕ್ತ ಕರ್ನಾಟಕ ಸಹ ಸಂಪಾದಕ ಶ್ರೀ ವಿ. ಭಿ. ನಾಯ
ಕರ ಅಧ್ಯಕ್ಷತೆಯಲ್ಲಿ "ಬಸವಧರ್ಮಕ್ರಾಂತಿ" ಎಂಬ ಉಪನ್ಯಾಸ ನಡೆದುದ
ಮುನ್ನ ಓದಿದ್ದು. ೨೧-೪-೧೯೫೦ [ವಿಶಾಲಕರ್ನಾಟಕ]

೨೪ ಸಾಹಿತ್ಯಯೋಗಿ ‘ಶ್ರೀನಿವಾಸ’

[ರಾಗಃ— ಚಕ್ರವಾಕ]

ಯೋಗಿ ನೀ ಶ್ರೀನಿವಾಸಾ—
ರಾಗನಿಧಿ ಮಂದಹಾಸಾ!

‘ಚಿಣ್ಣಹಸನಿದನು ಲಾಲಿಪುದೆಂ’ದು ನಯನುಡಿದು,
ಕನ್ನಡದ ನವ್ಯ ಕಾವ್ಯಾರುಣ ಧ್ವಜವಿಡಿದು,
ಕನ್ನಡದ ಬಾಳ ವಿವಿಧತೆಗೆ ಸವಿಗತೆಯೊರೆದು
ಕನ್ನಡಾಂಬೆಯ ಸೇವಕರೊಳಾದೆ ಹಿರಿದು ||

ಶ್ರೀರಾಮನೊಲುಧೀರಗಂಭೀರ ಮಾನಸಂ
ಶ್ರೀರಾಮನೊಲು ಸತ್ಯಸಾರುವ ಪರಾಕ್ರಮಂ!
ಆರಾಮೊಡಂ ನಿನ್ನ ಮನ್ನಿಸರೆ? ಹೊಗಳರೆ?
ಆರೆದೆಯು ಉಕ್ಕದೈ ನಿನ್ನಬಾಳ್ ಪೂರ್ಣಿಮೆಗೆ! ||

ಸೀನಿತ್ತುದೇ ಅನ್ನ ನೀಹುಟ್ಟಿದುದೆ ಚಿನ್ನ!
ಕನ್ನಡಾಂಬೆಯ ಮೂಗುತಿಯು ರನ್ನ ಸಂಪನ್ನ!
ಚೆನ್ನಕೇಶವ ಮೂರ್ತಿ ದಯೆಗೆಯ್ದು ಸತ್ಕೀರ್ತಿ
ಕನ್ನಡಕೆ ನೀ ನಿತ್ಯ ಮಂಗಳದ ಸ್ಫೂರ್ತಿ!

೧೦-೬-೧೯೫೦

೨೫ ಪ್ರಣಯ ಭಾಷಿತ

೧

ಚುಂಬನವೇಕೆ ರಮಣೀ!
ನಾಕೆನಗೆ
ತುಂಬಿದೀ ಪ್ರೇಮ ಸರಣೀ ||
ಚುಂಬನದ ಹೂಮುಗುಳೆ
ತುಂಬಿಗೇಂ ಮಧುಧಾರೆ
ಎಂಬುದನು ತಿಳಿದವೋಲಿ
ಚುಂಬನದ
ಹಂಬಲೇಕೆನಗೆ ಬಾಲೆ !

೨

ನಾನು ನೀನೊಂದಾಗೆ ಕೌತುಕವು
ಕಾಲಸರಿವುದೆ ನಿಮಿಷವು !
ನಮ್ಮ ನಲ್ಮೆಯು ನೋಟ ಕೂಡಿತೆ
ಇಹಪರಗಳೊಂದಾದವು !

ನುಡಿನುಡಿಯೊಂದಿಲ್ಲ, ನೋಟದೆ
ನುಡಿದುದೆಲ್ಲವ ಮೋಹಿನೀ !
ಬಿಡುಬಿಡೆಂದರೆ ಬಿಡುವೆನೆ? ತುಟಿ
ಯೊತ್ತು ಒತ್ತೆಸುಹಾಸಿನೀ !

೨೬ ಏನೊ ತಡವಾಯಿತೆನೆ....

೧

ಏನೊ ತಡವಾಯಿತೆನೆ
ಕಿನಿಸಿ ಕೊಂಕುವುದೆ, ಮೊನೆ
ನೋಟದಿಂದೆದೆಯ ಸೀಳುವುದೆ?
ಮುನಿಸಲ್ಲದೇಕಿಂತು
ಕದಪಿನಲಿ ಕಡುಗೆಂಪು?
ಇದನು ನಾನೆಂತು ತಾಳುವುದೆ?

ತಿಂಗಳದೊ ಮೂಡಿಲ್ಲ,
ತಾರೆಗಳು ಹಾಡಿಲ್ಲ,
ನೆರೆಮನೆಯ ಜನವಿನ್ನೂ ನಿದ್ರಿಸಿಲ್ಲ:
ಎನ್ನ ಮಧುಲಕ್ಷ್ಮಿಗೇ
ಸಾತುರವೊ ಕಾತರವೊ!
ಬಂದೆನಿದೊ ಬಂದೆ, ತಡವಿಲ್ಲ!

❁ ❁ ❁ ❁

ತಿಂಗಳದೋ ಮೂಡಿತು
ತಾರೆ ಅರಳಿತು
ತಂಗಾಳಿ ತೀಡಿತು
ಮೌನ ಮುರಳಿತು
ಅಲರಸಂತೆ ಮುಗಿಯಿತು,
ಹೊಳಲನಿದ್ದೆ ಬಿಗಿಯಿತು—
ಹೊಳೆಯ ಮಳಲ ದಿಣ್ಣೆಗೆ
ನಡೆವನಾವು ಸುಣ್ಣಗೆ!

೨೭ ಕವಿನೋಟಕೆ

೧

ಚಿಂತೆಯ ಮುಗಿಲಂತರದೊಳ
ಗಿದೆ ಸಂತಸದುದಯ—
ಶಾಂತಿಯ ಮರೆಯೊಳಗಿರುವೊಲು
ಸಂಗೀತದ ಹೃದಯ ||
ಮೌನದೊಳಿದೆ ಮಾತಿನ ಚೆದಿ
ಅದೆ ವೀರ್ಯವಿಪಾಕ
ನಾನೀನೆಂಬುವ ತೆರೆಯಾ—
ಚೆಯು ಅಮೃತದ ನಾಕ ||

೨

ಕವನದ ತರು ಕುಸುಮಿಸಿತೆನೆ
ಕಲ್ಪನೆ ಕಣ್ತೆರೆಯೆ
ನವಭಾವ ಪ್ರವಿಭಾಸಿತ
ಬೆಳಕಿನ ಮಳೆ ಸುರಿಯೆ ||
ನುಡಿಹುಟ್ಟಿತು, ಹುಡಿಗುಟ್ಟಿತು
ಕಾರ್ಪಣ್ಯದ ಲೋಕ!
ಗುಡುಗುಡಿಸುತ ಸಿಡಿಲೆರಗಿತು
ಸತ್ಯ, ಲಯಿಸೆ ಶೋಕ! ||

೨

ಸತ್ವದ ನೆಳಲಾಯಿತು ತಮ,
ರಾಜಸಕಳೆ ಇಳಿಯೆ
ಸಮದೃಷ್ಟಿಗೆ ನವಿರೆದ್ದಿತು
ಸತ್ಯದ ಬೆಳೆಯುಳಿಯೆ!

ನವರಾತ್ರಿಯೊ, ಶಿವರಾತ್ರಿಯೊ,
ಶರಶಿಶಿರಗಳೊಂದೇ
ಕವಿನೋಟಕೆ ನಿಜದಾಟಕೆ
ಹಸನೆಲ್ಲವು ತಂದೆ! ||

೬-೮-೧೯೩೦
(ಕರ್ಮವೀರ ಹುಬ್ಬಳ್ಳಿ)

೨೯ ಬಾಹ್ಯಲೋಲುಪ ಭಕ್ತರು

ಪ್ರೇಮವೆಂಬುವಾ ತುಂಬಿದ ತೊರೆಯಲಿ
    ಈಜುತಿರಲು ಮನುಜ
ಕಾಮವೆಂಬುವಾ ಕಲ್ಲ ಕಟ್ಟಿಕೊಳೆ
    ಸಾವನಪ್ಪನು ಸಹಜ
ಪ್ರೇಮವಿಲ್ಲದಾ ಶುಷ್ಕಹೃದಯಿಗಳು
    ಯೋಗದೂರರಹರು;
ಕಾಮ ಕ್ರೋಧ ದ್ವೇಷಾಗ್ನಿ ಮತ್ಸರರು
    ಏನ ಸಾಧಿಸುವರು ?

ಲೋಹ ನೀರಿನೊಳಗದ್ದಲದರ ಎದೆ
    ಹನಿಯಗೊಂಬುದುಂಟೆ?
ಬಾಹ್ಯ ಲೋಲುಪಗೆ ಬಯಲಬೆಳಕಿನೊಳು
    ದೀಪ್ತಿ ಹೆಚ್ಚಲುಂಟೆ ?
ಅಂತರಾತ್ಮನೊಳಗಂತರಿಂದ್ರಿಯವ
    ಲಯವಗೊಳಿಸದವಗೆ
ಭ್ರಾಂತಿಯಲ್ಲವೆ ದಿವ್ಯ ದರ್ಶನವು ?
    ಹಗಲುಗನಸ ಭವಿಗೆ!

ಪೂರ್ವ ವೇದಗಳು, ಸರ್ವಸಾಧುಗಳು,
    ಸಿದ್ಧಬುದ್ಧರೆಲ್ಲ
ಸಾರ್ವಯೋಗವೇ ಪೂರ್ಣ ಯೋಗವಿದು—
    ವೀರ್ಯ. ಮೌನವೆಲ್ಲ!

೫- ೬--೧೯೫೦
(ವಿ. ಕರ್ನಾಟಕ)

ಶ್ರೀಲ ಶ್ರೀ ಡಿ. ವಿ. ಜಿ. *

ಕಂ|| ಸಿರಿಯನೆ ಕಬ್ಬಿಗರೆರೆಯನೆ
ಕಿರಿಯನ ಕಿರುಗಾಣ್ಕೆ "ರಾಘವಂ"ಬದನೊಲಿದೇ
ನೊರೆದೈ? ನಯವಾಕ್ಯಾಮೃತ |
ಸೆರೆದೈ ನೀನೆನ್ನ ಬಾಳ್ಗಿಡಂ ಪಣ್ಬಡೆವೊಲ್ !
ಮಾತಿನ ಮುತ್ತಿನಮಳೆಯು—
ನ್ನೀತುಕರಂಕರೆದ ಸಿರಿಯು ನಿನ್ನೆದೆ ಯೊಳ್ಪಿಂ
ಮಾತೆ ಸರಸ್ವತಿ ನಯನದ
ಜ್ಯೋತಿರ್ಮಣಿತಳ ರಸಾಬ್ಧಿ ಯೆಂಬುದೆನಿಸಪಂ !
ನಿನ್ನಯ **ನಿವೇದನಂ** ಪೇಳ್
ನಿನ್ನಯಬಾಳ್ ಬೆಣ್ಣೆಯೆಂಬೊಲೆಸೆವಾ **ಕಗ್ಗಂ**
ನಿನ್ನಾ **ರಾಮಪರೀಕ್ಷಣ**
ಮಿನ್ನಾರ್ಗಮಭಾವ್ಯ ಪಿನ್ನಲಾರ್ಪೊರೆ ನಿನಗೈ !
ನಿನ್ನಯ ನುಡಿ ನಿನ್ನಯ ನಡೆ
ಯಿನ್ನಾರೊಳ್ಕಂಡುದಿಲ್ಲ ನುಡಿಪಂಡಿತರೊಳ್ !
ರನ್ನಂ ಮುನ್ನೊರೆದಾ ನುಡಿ
ಯನ್ನೆಯುಮೆನೆ ನಿನ್ನ ಬಾಳ್ಕೆ ನಿರ್ಮತ್ಸರತ್ವ
ಸತ್ಯೋಪಾಸನಮಾರ್ಗದಿ
ನಿತ್ಯಂ ದುರ್ವೃತ್ತರೊಡ್ಡಿದಡ್ಡಿಗಳೆಲ್ಲಂ
ಮಿಥ್ಯೆಯ ಮುಗಿಲೊಲ್ ಕರಗಲ್
ಸತ್ಯಪ್ರಭೆವೆತ್ತುನಿಂತೆ ನಾನಿಮೊಪಿರಿಯಾ !

* ನನ್ನ "ರಾಘವಸ್" ಕಳುಹಿಸಿದ ೫ ತಿಂಗಳ ತರುವಾಯ ಅದರ ಕುರಿತು ಅವರು ಬರೆದ ಪತ್ರವು ತೀರ ಅನಿರೀಕ್ಷಿತವಾಗಿ ಬಂದು ಸೇರಿದಾಗ ಬರೆದದ್ದು. ೨೬ ೭–೧೯೫೦

೨೦ ಸುಕರ-ದುಷ್ಕರ ಕರ್ಮವೀಥಿ

ಹಗಲಿರುಳು ಸುಖದುಃಖ ಸತ್ಯ ಮಿಥ್ಯೆಗಳಿಂದ
ಸುಕರ-ದುಷ್ಕರ ಕರ್ಮವೀಥೀ
ಜಗದಾದ್ಯನಂತ ವಿಧಿ ಜೀವಲೋಕಕ್ಕೆಳೆದ
ಗೆರೆಗಳೆರಡಿವು ಮರ್ಮವೇಧಿ !

❁ ❁ ❁ ❁

ಹಿಂದೆ ಕುರುಪಾಂಡವರು ನಳಪುಷ್ಕರಾದಿಗಳು
ದಾಯಾದ್ಯಕಾಗಿ ಬಡಿದಾಡಿ
ತಿಂದು ತೇಗಿದರೆನಿತೊ ಬಂಧುಬಾಂಧವರ ನಲಿ
ವಿಂದ ರಕ್ತೋದನವ ಮಾಡಿ!
ಆರ್ಯ-ದಸ್ಯುಗಳನಿಬ್ಭಾಗಿಸಿದ ವಿಂಧ್ಯಾದ್ರಿ
ಮಥನದಂಡವನೆ ಮಾಡಿ
ವೀರ್ಯವಂತರು ಭಾರತಾಂಬುಧಿಯ ಮಥಿಸಿದರು
ಧರ್ಮಾಮೃತವನೆ ಬೇಡಿ!

❁ ❁ ❁ ❁

ವಿಶ್ವಶಾಂತಿಯ ಬಯಸಿ ವಿಜ್ಞಾನ ಶರಧಿಯನು
ಮಥಿಸ ಮತಿವಂತರಿಂದು
ನಾಶ ಕೋಲಾಹಲವ ತರುವ ಹಾಲಾಹಲವ
ಪಡೆದರೇ ಸಮರಕೆಂದು!

ಪೂರ್ವ ಪಶ್ಚಿಮವೆಂದು ವರ್ಣಭೇದವಾತೆಂದು
    ಗರ್ವಗಿರಿಯೇರಿನಿಂದು
ಸಿಡಿಗುಂಡ ಹಿಡಿಗೊಂಡು ಗುಡುಗುಡಿಸುವರಕಂಡು
    ಸೃಷ್ಟಿಯೇ ನಾಚಿತಿಂದು!

ನಮ್ಮ ನುಡಿಯೇ ನೀತಿ ನಮ್ಮ ಕೃತಿಯೇ ಖ್ಯಾತಿ.
    ನಮ್ಮೊಪ್ಪಯೇ .ಲೋಕಮತವು
ನಾವೆ ಲೋಕಾಧೀಶರೆಂಬ ಭಾವಾವೇಶ-
    ದಂಧತೆ ಇದೆಂಥ ಹಿತವು?

ಬೆಳಕು ಕತ್ತಲೆ ಒಂದನೊಂದು ಬೆನ್ನಟ್ಟುವುದೆ
    ಸೃಷ್ಟಿಚಕ್ರದ ಚಲನಧರ್ಮ;
ಸೆಳೆಯುವುದೆ ಸತ್ವತಾಮಸ ಒಂದನೊಂದಿಂತು.
    ಜೀವ ಸಂಸ್ಕಾರ ಮರ್ಮ!

೩೧ ಬಾಳ್ವೆ *

೧

ಕಂ॥ ನಡೆನೆಳಲೀ ವಾಳ್ಕೆಯುದಂ
ಸೊಡರಿಸಿದಾ ಬತ್ತಿ ಜೀವ ವೆಂಬರ್ ತೀವಿದರ್
ಒಡಲರಗೆಯ್ತುದಿ ಬಿಳ್ದೊಡೆ
ಸೊಡರಿಸದೇಂ ಕೀರ್ತಿಬಿಂಬ ತಿರೆ ಇರುವನ್ನಂ?

೨

ಸೆರೆಮನೆ ಈವಾಳದನು—
ತ್ತರಿಸದ ಜೀವಾತ್ಮಬಂಧಿ! ಅರಿಷಡ್ವರ್ಗಂ
ಸರಳಾ ಸೆರೆಮನೆವಾಗಿಲ್
ಮುರಿಯುತದಂ ಮುಕ್ತಿಯಾಂಪರರಿವರ್ಧರೆಯೊಳ್

೩

ಮನಮಿದು ಮುಕುರಂ, ಮಾನಿಸ-
ರನುಭವಿಪಾ ದುಃಖಸುಖದ ಪಡಿನೆಳಲದರೊಳ್
ಅನುವಿಂ ಮೂಪೊರ್ಳೆದಿರ್ಕುಂ!
ಮನಮದರಿಂ ಸ್ವಚ್ಛಮಿರ್ಕೆಬಾಳ್ಕೆಯೊಳೆಲ್ಲಂ!

೪

ಹರಯದ ಹೊನಲುಬ್ಬೆಗದಿಂ
ಮರೆಬೀಗುತ ತೀರ ಪೂರ ಕೊರೆಯುತ ಪರಿಗುಂ
ಅರಿದಂ ಜವ್ವನದೆಡೆಯೊಳ್
ನೆರೆಬೀಗದೆ ಬಾಳ್ಗೆ, ಬಾಳ್ಕೆಯುದರಿಂ ಸೌಖ್ಯಂ

* ೧೯೨೯ನೇ ಅಕ್ಟೋಬರ ಸಂಚಿಕೆ—
"ಕರ್ನಾಟಕ ಕೇಸರಿ" ಪುತ್ತೂರು.

೩೨ ಪಂಡಿತನಕ್ಕಿ *

ಸುರನೆಯುರಿ ಮುಸುಕಿರುವ ಕಾಲದಡವಿಯಲಿ
ಗರಿಮುಮುರಿ ಕುಳಿತು ತೂಕಡಿಪ ವೇಳೆಯಲಿ-
ಇತಿಹಾಸಸೂತ್ರದಲಿ ಕೋದಮುತ್ತುಗಳ-
ಸತ್ಯಮಿಥ್ಯೆಗಳ ಸಂವಾದ ಬಿತ್ತುಗಳ-
ತಿಂದಿನಿಸು ತೃಪ್ತಿಯನು ತೋರದಿದೆ ಹಕ್ಕಿ.
ಮುಂದಿರುವ ಮರವೆಯನು ಕಾಣಕಣ್ಣಿಕ್ಕಿ!

೨

ರನ್ನ-ಹಂಪಾದಿಗಳ ಕಾವ್ಯಕಾನನದ
ಉನ್ನತೋನ್ನತ ವೃಕ್ಷ ರಾಜಸಂಪದದ,
ನಿನ್ನೆಗಳ ನೆನೆನೆನೆದು ಮರುಳುಗಾನದಲಿ
ತನ್ನ ತಾನರಿಯದೆಯೆ ಮಿಥ್ಯಾವ್ಯಾಜದಲಿ
ಹಾಡುವುದ ಮರೆತಿಂತು ಕುಳಿತೆಯೋ ಹಕ್ಕಿ?
ಹಾಡಲರಿಯದೆ ನಾವು ಅಳುತಿಹೆವು ಬಿಕ್ಕಿ!

೩

ಕಾಲ ಸರಿಯುತಲಿಹುದು ಕಳ್ಳಹಜ್ಜೆಯಲಿ!
ಲೋಲರಾಗಿಹರೆಲ್ಲ ಸುಳ್ಳುಬಿಜ್ಜೆಯಲಿ!
ನಮ್ಮ ತೋಟದ ಹಕ್ಕಿಗಿಲ್ಲ ಕೊರಲಿಂಪು,
ಸುಮ್ಮನಾಂತಿಹವೇನೊ ಹೊರನ್ಯಾಯ ಪೆಂಪು!
ಸವಿಗೊರಲ ಕೋಗಿಲೆಯ ಕುಕಿಲಕಲ್ಪನೆಯೂ
ಕಿವುಡುಗೇಳುವರುಂಟೆ? ಸಲಿಸುಕಾಮನೆಯಾ!

* ಪೂಜ್ಯರಾದ “ರಾಜಕವಿ” ಶ್ರೀ ಮಂ॥ ಗೋವಿಂದ ಪೈ
ಇವರನ್ನುದ್ದೇಶಿಸಿ ಬರೆದದ್ದು.

೩೩ ಶ್ರೀ ದಿವಾಕರಾಭಿನಂದನಂ

ಕಂ|| ಸಿರಿಗೆರೆಯನಾದ ದೇವಂ
ಮುರರಿಪು ಕನ್ನಾಡಿನರಿಯ ಕುಲಸಂಕುಲಮಂ
ತಿರಿತಿರಿಪಿ ತರಿದು ಕನ್ನಡ-
ರಿರವಂ ಸೊಗಗೊಳಿಸಲಿಳಿಸಲಿಳಿದವನೀತಂ ! || ೧ ||
ಪೆಸರೆನಿತು ರಂಗೊ, ಕನ್ನಾ-
ಡೊಸೆದಿತ್ತುದು ರಂಗನಾಥ ಮಂಗಳಗೇಯಂ !
ಮುಸೆದೊಪ್ಪುವಹಿಂಸಾಯುಧ
ವಿಶದಮಕೋಪಮೂರ್ತಿ ಗಾಂಧಿ ಶಿಷ್ಯೋತ್ತಮನೈ|| ೨ ||

ಉ|| ಇಂದಿನ ಕನ್ನಡಕ್ಕಿವನೆ ಕಣ್ಣೆವಿಕ್ಕೆಯುವ ಕಾಲಪೆಂಬವೊಲ್
ನಿಂದವನೀತನಲ್ತೆ ! ಬಹು ಶಾಸ್ತ್ರವಿಶಾರದ ವೀರ ಭೂಸುರಂ ||
ಎಂದಿಗು ಕಂದದಂತಿವ ನಿರಂತರ ಕಾರ್ಯಕರಂ **ದಿವಾಕರಂ**
ನಿಂದಕರೆಂದುವರ್ಕದಿರದೆಳ್ಚರದಿಂ ಜರಿಪಂ ಸ್ವಮಾರ್ಗಮಂ || ೩ ||

ನಾಡಿನ ಸೇವೆ, ಮತ್ತೆ ನುಡಿಸೇವೆ, ಪುರಾತನ ಧರ್ಮಸೇವೆಯು-
ನ್ನೀಡಿರಪೆಂಬುಗೆಯ್ದುಸಿವ ತತ್ವಪರಿಪ್ರುತ, **ದೇಶವತ್ಸಲಂ**
ಆಡಿದರುಂತೆ ಪೊಲ್ಲಮೆಯನಂತೆಯೆ ಕಾಡಿದರೆಂತೊ ದುರ್ಜನರ್
ಕೇಡಿನಿಸಪ್ಪೊಡಂ ಬಿಡದೆ ಕನ್ನಡ ತಾಯ್ಗೊರೆದಕ್ಕಪುತ್ರಕಂ || ೪ ||

ಪಿಂದೆ ಯುಗಾದಿಯೊಳ್ತಡೆಯೆ ವಾರ್ಧಿಯು ಪುಟ್ಟಿಮುವಲ್ತೆ ವಸ್ತುಗ-
ಳ್ಪಿಂದವೆ ಲಕ್ಷ್ಮಿ, ಚಂದ್ರ, ಗಜ, ವಾಜಿ, ಗದಾಯುಧ,
ಶಂಖಪೀಯುಷಂ
ಅಂದಿನೊಲಿಂದು ಗಾಂಧಿ ಭರತಾಂಬುಧಿ ಮಂಥನದಿಂದ ಪೊಂದಿದಂ
ಸಂದನರೋತ್ತಮರ್ಜಹರು, ದಾಸ, ಪಟೇಲರು, ಮಾಲವೀಯರು||೫||

ಪುಟ್ಟಿದರಿಂತಪೆಂಪೆಗೆ ಸಂತಸಮಾದರು ಎಂದರು ಸ್ತ್ರೀಯ
ಪ್ರಾಂತ್ಯದೊಳ್

ಪುಟ್ಟಿದನಲ್ತೆ ಕನ್ನಡದ ತಾಯ್ನೆಲದೊಳ್ಪೆಸರಾದ ನಾಯಕಂ !
ಪಟ್ಟಮನಾಂತು ಕನ್ನಡದ ಜಟ್ಟಿಗನಿಳ್ಳೆಸನೆಂಬ ಪೆರ್ಮೆಯಂ
ಮುಟ್ಟಿದನಲ್ತೆ ತುತ್ತ ತುದಿಯಂ. ಸದಯಂ. ಹೃದಯಂ,
ದಿವಾಕರಂ ॥ ೬ ॥

ಚಂ॥ ತ್ರಿದಶಕ ವರ್ಷದಿಂದಿನಿಸು ಜೀವಸಗೊಳ್ಳದೆ ಗೆಯ್ದು ಸತ್ಕೃಪ-
ಕೃದವಿಡುದಲ್ತೆ ಸತ್ಪಥ ಸಮುಜ್ಜ್ವಲ ಕೀರ್ತಿಯು ಕರ್ಮವೀರನಂ-
ಬುಮ ! ಜನ ನಿಸ್ಪೃಯುಕ್ತಿಯು ಬಣ್ಣಿಸಲಣ್ಣ ವಿರೋಧಿ ಮಾನಿಸ-
ರ್ಗವೆಯೊಳಗಂಬುದುಂಬಿದೊಲಿಪೇನುದಿದತ್ತುರಿ. ನೋಡೆ ಚಿತ್ರಮೈ !॥೭॥

ಕಂ॥ ಈತಂ ಸುಮನಸ ಸುಪ್ರತೀ-
ನೀತಂ ಮಿತಭಾಷಿ ತೋಷಿಯುಪಗತ ಶೋಕಂ !
ಪಾತಕರಿಂಗೀತ ಯಮಂ
ಪ್ರೀತಂ ಯಮನಿಯಮ ಜಾತಕರುಣೋಪೇತಂ ॥ ೮ ॥

"ಸಾಜ್ಯೋತಿ" ಶಿವಮೊಗ್ಗ
೬ . ೧ — ೫೦

* ಶ್ರೀ ದಿವಾಕರರು ಮಂತ್ರಿಪಟ್ಟ ಪಡೆದ ಸಂದರ್ಭಕ್ಕಾಗಿ ಬರೆದದ್ದು.

೩೪ ಶ್ರೀ ದೇವೀಸ್ತವ

(ರಾಗ:— ಹಿಂದೋಳ ಆದಿತಾಳ)

ಶ್ರೀ ಮೂಕಾಂಬಿಕೆ ಪಾಲಿಸೌ ॥ ಪ ॥
ಶ್ರೀಕರಸುತೆ, ಶಂಕರ ಹಿತೆ.
ನಾಕಲೋಕ ಸಂಪೂಜಿತೆ ॥ ಅ ಪ ॥

ಕೋಲಾಚಲ ಪುರವಾಸಿನಿ
ನೀಲಾಂಬುದ ಸಂಕಾಶಿನಿ
ಬಾಲಾಂಬಿಕೆ. ಮೂಕಾಂಬಿಕೆ
ಲೋಲಾಂಬಿಕೆ ಜನನೀ ॥

ಮೃಗರಾಜ ಸಿಂಹಾಸಿನಿ,
ಖಗಕುಲ ಕಲಕಲ ನಾದಿನಿ,
ತ್ರಿಗುಣ ವಿಮೋಚಿನಿ ತೋಷಿಣಿ
ಅಘನಾಶಿನಿ ಅಂಬಾ ॥

ಹೀರಕತರು ಮೂಲಸ್ಥಿತೆ
ಕ್ಷೀರೋದಧಿ ಚಂದ್ರಸ್ಮಿತೆ
ಕಾರುಣ್ಯಾಮೃತ ಸಂಭೃತೆ
ಮೂರಾರಿ ದಯಿತೆ ॥

ಮಹಾಕಾಶ ಮೌನಾಂಬರೆ
ಅಸಂಖ್ಯಾತ ವಿಶ್ವಂಭರೆ
ಮಹಾಕಾರೆ, ಮಹೋದಾರೆ
ಕಲ್ಪನಾ ವಿದೂರೆ ॥

ಮಧುಕೈಟಭ ಮಹಿಷಾಸುರ
ಚಿಕ್ಷುರಾಕ್ಷಸ ರುಧಿರೋದ್ಧರೆ
ಶುಂಭನಿಶುಂಭಾಸುರಹರ
ಪರಾಶಕ್ತಿ ಶುಭಕರೆ ||

ವಾಗೀಶ್ವರಿ, ಭಾಗ್ಯೇಶ್ವರಿ
ಕಾಲೇಶ್ವರಿ ಮಹೇಶ್ವರಿ,
ಅಯೋನಿಜೆ, ಮಹಾದ್ರಿಜೆ,
ನಿತ್ಯಾನಂದೇಶ್ವರಿ ||

ಮಹಾಪವಿತ್ರ ಕ್ಷೇಮಕಾರಿಣಿ
ಭವಸಾಗರ ಸಂತಾರಿಣಿ
ಸುಖಾನಂದ ಸಂವರ್ಧಿನಿ
ಮೂಕಾಸುರ ದಮನೀ ||

೧೬–೧೧–೧೯೫೦
(ವಿಶಾಲಕರ್ನಾಟಕ)

* ೧೯೪೮ನೇ ಫೆಬ್ರುವರಿಯಲ್ಲಿ ಸಕುಟುಂಬನಾಗಿ
ಕೊಲ್ಲೂರಿನ ಶ್ರೀ ಮೂಕಾಂಬಿಕಾ ದರ್ಶನಕ್ಕೆ
ಹೋದಾಗ ರಚಿಸಿದ್ದು.

೩೫ ಶ್ರೀ ಉಡುಪಿ ಕೃಷ್ಣಾಷ್ಟಕಂ

(ರಾಗ:— ದುರ್ಗಾ)

ಶ್ಯಾಮಲಸುಂದರ
ಕೋಮಲತನುಧರ
ಮಧುರ ಮುರಲಿಕರ
ಮಧು ರಾಕ್ಷಸಹರ

ರಾಧಾರಮಣಾ
ವೇದಾವರಣಾ
ವಿನುತಾಚರಣಾ
ಮುನಿಜನ ಶರಣಾ

ಗೋವರ್ಧನಧರ
ಪಾವನ ಯದುವರ,
ನವಯೌವನ ಚಿರ
ಯುವತೀಜನಸ್ಮರ ||

ಗೀತಾಮೃತ ಸಂ-
ಗೀತ ವಿಲಾಸಂ,
ಮಧುರ ಸುಹಾಸಂ
ಹೃದಯವಿಕಾಸಂ ||

ಮೈತ್ರವಲಿನ ಫಲ
ಸತ್ಯ ಸುಜನ ಬಲ
ಪುಣ್ಯ ಸರಸಿ ಜಲ
ಜನ್ಯ ಕಮಲ ದಲ! ।

ದ್ವಂದ್ವ ವಿಮೋಚನ
ದರ್ಶನಲೋಚನ,
ಸತ್ಯಸುಯೋಜನ
ಭಕ್ತಪ್ರಯೋಜನ ||

ಪಾಂಡವಜನ ಪರಿ-
ಪಾಲನ ಶ್ರೀಹರಿ,
ಸೌಂದರ್ಯೋಪರಿ
ಸತ್ಯಸುಧಾಸರಿ ||

ಮಧ್ವಯತಿಪತಿ
ಹೃತ್ಕಮಲಾಪತಿ
ಉಡುಪಿಪುರದ್ಯುತಿ
ಕರುಣಿಸು ಸನ್ಮತಿ ||

[illegible] ಮಾರ್ಚಿಯಲ್ಲಿ ರಾಣೇಬೆನ್ನೂರ [illegible]
ಹಲಿಹಳ್ಳಿಯಲ್ಲಿ ಶ್ರೀ ನೀಲಗಿರಿರಾವ್ ಕುಲಕರ್ಣಿ
ಇವರಲ್ಲಿದ್ದಾಗ ಬರೆದದ್ದು.

೩೬ ಮಾನಸಗಂಗಾ

ರಾಗಃ— ಕೇದಾರ — ಆದಿತಾಳ
ಮಾಲಕಂಸ — ತ್ರಿತಾಲ

ಮಂದವಾಗಿ ಮಂದಾಕಿನಿ ಬಂದಳು
ಸುಂದರ ಶಿವಜಟೆಯಿಂದಿಳಿತಂದಳು ||ಪ||

ಕಸ್ತೂರಿ ಕೇಸರ ಅಗರು ಸುವಾಸನೆ
ಮುತ್ತಿದೆಲರ ಸಂಸ್ಪರ್ಶ ಭೂಷಣೆ
ಕೈಲಾಸಪತಿಯ ಶಿರೋರುಹಾಸನೆ
ಶೈಲರಾಜಸುತೆ ಲೋಕಪೋಷಣೆ ||

ಮುತ್ತಿಸುಳಿದು ಹಿಮಗಿರಿಯಿಂದಿಳಿದು
ಕತ್ತಲೆಯನು ಜನಮನದಿಂದಳಿದು
ಎತ್ತೆತ್ತಲು ಮುತ್ತಿನಬೆಳೆ ಬೆಳೆದು
ನಿತ್ಯವು ಹೊನ್ನಿನ ಹೋಳಿಯನೆ ಸಲಿದು ||

ದೇವದಾರು ಶ್ರೀಗಂಧವೃಕ್ಷಕುಲ
ಪಾವನಗೈಯುವ ಗಂಗೆ ಪುಣ್ಯಜಲ
ಭೂವಿನೋದವನೆ ಬಯಸಿಬಂದಳೆನೆ
ಧಾವಿಸಿದಳು ಹರಿದ್ವಾರ ಪಿಂಡಿಯನೆ ||

ಎನ್ನಮನದ ಮಾನಸದ ಶುಚಿಯ ಸೆಲೆ
ಎನ್ನ ಜೀವನಾದ್ಯಂತ ಹರಿದಳಲಿ !
ಅಮೃತವಾಹಿನೀ, ಚಿತ್ತ ಚೋದಿನೀ
ಅಂತರಗಂಗೆ ಹೃದ್ರಂಗವ್ಯಾಪಿನೀ ||

[ಕರ್ಮವೀರ ವಿಶೇಷಾಂಕ ೧೯೫೦]

೩೭. ದಾರಿ

[ರಾಗ:- ಶಹನ ಝಂಪೆ ತಾಳ]

ತಂದೆ ನಾನಡೆನಡೆದು ಬಳಲಿಬಳಲಿಹೆನು, ದಾರಿ
ಇನಿತೆಂದು ಕಡಿನವೆಂದರಿಯದಾದೆ || ಪ ||
ಹಿಂದಕಡಿಯಿಡಲಾರೆ, ದಾರಿತೋರುವ ತಾರೆ.
ಮುಂದರಿಯೆ, ಮಬ್ಬಿನಲಿ ಕಾಣದಾದೆ || ಅಪ ||

ಕಲ್ಲುಂಟು ಮುಳ್ಳುಂಟು ತಗ್ಗುದಿನ್ನೆಗಳುಂಟು
ಮೆಲ್ಲಡಿಯ ಮನುಜಗಿದು ಸಲ್ಲುದುಂಟೆ?
ಎಲ್ಲದಾರಿಗಳಂತೆ ಈ ಲೋಕದೊಳಗಂತೆ
ಸೊಲ್ಲಿಸಿದರಲ್ತೆ ಬಲ್ಲವರು ಮುಂತೆ! ||

೧

ವಕ್ರವಾಗಿದೆ ದಾರಿ ಯೆಂದದನು ದೂರುವೆನೆ?
ಅವನಳಿಯುವೆನ್ನಡಿಯ ಹಳಿಯುದಿಹೆನೆ?
ಚಕ್ರಸೂರ್ಯರ ಶುದ್ಧ ಪಾದವಾದೊಡಮೇನು
ಹುಡಿಯುಂಟದೇ ಹಾದಿನಡೆಯಲಹುದೆ?

೨

ಕ್ರೈದೀವಿಗೆಯೆ? ಮಿಸುಕುವಗ್ನಿ ಜ್ವಾಲೆಯೆ?
ಬೇದಿಯೇ? ಬಾಂಬ್ರಿನ ನಕ್ಷತ್ರಮಣಿಯೆ?
ಪೊಗಳಿಕೆಯೆ? ತೆಗಳಿಕೆಯೆ? ಹೂವೆ? ಹಾವಿನ ಹಡೆಯೆ?
ನಗೆಯೆ? ಬಗೆಯರಿನ ಹಗೆಗಳ ಕೋರೆಯೆ?

೨

ಅಪನಂಬಿಸು ನೆಚ್ಚಿ ನಡೆಯಲಾರೆನೊಲ್ಲೆ! ನೀ
ನೊಬ್ಬನೇ ಕೈಗೊಡುವ ಬಂಧುವೆನಗೆ
ಭಾವ ಭಾನದಿ ಬಂದು ಕನಸನೆನಿತನೊ ತಂದು
ತಂದೆ! ನೀ ಮುನ್ನೆನಿತು ಪಾಲಿಸಲಿಬಿದೆ! ||

ಕರ್ಮವೀರ ವಿಶೇಷಾಂಕ
೧೯೪೯.

೩೭ ಸತ್ಯಾಂತರಂಗ

(ರಾಗ: ಮೋಹನ ಆದಿತಾಳ)

ನಾದಸಮುದ್ರದ ಮಧುರತರಂಗ
ಪಾದಪ್ರಕ್ಷಾಳಿತ ಸತ್ಯಾಂತರಂಗ || ಪ ||
ಪಾಪವಿದೂರ ಸಂತೋಷತೀರ
ಕಾಪಾಡುಸತತ ದೇ! ಕಾರುಣ್ಯಪೂರ ||

ಪದಬಂಧದೊಳಗರ್ಥಜ್ಯೋತಿಬೆಳಗುತ್ತಿಹ
ಹೃದಯಪಂಕಜಗಂಧ ಪ್ರೀತಿಯಾಗಿರುವ ||
ಮಧುರ ಛಂದೋಲಂಕಾರ ಮನೋಹರ
ಸಮಾನಾರ್ಥ ಪರಿಪೂರ್ಣ ಶೃಂಗಾರ

ಕೊಳಲ ತನು *

[ರಾಗಃ— ಖಮಾಸ್ ಆದಿತಾಳ]

ಎನ್ನಯ ತನುವಿದು ಕೊಳಲಹುದೇ ಹರಿ !
ನಿನ್ನ ಕೈಯ ಸ್ಪರ್ಶವು ಬಹುದೆ? ||
ಸರಳ ಮುರಳಿ ಸಂಗೀತಸಮೀರದಿ
ಮಂತ್ರ ನೀಡದನ ಚೆದರಿಸುತೆನ್ನೆದೆ
ಸರಸಿಜಮಧ್ಯದ ಭಕ್ತಿಸೌರಭವ
ಸ್ವಾಂತದಿ ನೀ ಸ್ವೀಕರಿಸೈ ತಂದೆ ||
ಭೋಗರಂಧ್ರವೆನ್ನೀತನುಗೊಳಲಿದ
ರಾಗವೇಳ್ಗೆಯಾ ಮೃದುಲರಸದ ವೈ-
ರಾಗ್ಯರಸದೊಳಗೆ ನಿಲಿಸುತ ನಲಿಸೈ,
ತ್ಯಾಗಪುಳಕವನು ಅರಳಿಸು ತಂದೆ ||

ಕೊಳಲಿನ ಸುಮಧುರ ಗಾನ ಲಹರಿಯಲಿ
ಫಲಿತ ಭೋಗವೈರಾಗ್ಯವು ಜನದಲಿ
ನಿಲುಕಲಿ, ನೆಲಸಲಿ, ಪಾದಪದೊಲು ಹರಿ
ಒಲಿದು ಬಾಜಿಸೀ ಕೊಳಲನು ತಂದೆ ||

ಕಣ್ಣಿಗಗೋಚರ ಕೊಳಲಗಾನದೊಲು
ಮನ್ಮನದಲಿ ತಪನಾದಬಿಂದು ನಲಿ
ಪುಣ್ಯಾತ್ರ ತಳಿರಿಸೆ ವಿಶ್ವಪ್ರೇಮವನು
ಸನ್ಮಾನಿತ ಸುಮಸುಗಂಧವೆನಿಸಲಿ ||

* [illegible]ರಲ್ಲಿ ಪ್ರಕಟಗೊಂಡ ನನ್ನ ಹೂಗೊಂಚಲಿನಿಂದ

೩೯ ಬೇಡಿಕೆ

[ರಾಗಃ– ಆರಭಿ –ಆದಿತಾಳ]

ಬೇಡುವೆ ನಾನಿನಿತಂ– ಶ್ರೀಹರಿ
ನೀಡುದಯನ ತೋರಿ || ಪ ||
ಕಾನನದಲಿ ಕುಟ್ಮಲಗಳರಳುತೆ
ಲೀನವಾಗಿ ಅಜ್ಞಾತದಿ ಪರಿಮಳ
ಸೂಸುತಲಿರುವೊಲು ಹೆರವರ ಸೇವೆಯು
ಅತಿಸಿಗ್ಗೈಯುತಲರಿಯದೊಲಿರುವುದ ||

ಕೊಳದೊಳು ಕೆಸರಲಿ ಜನಿಸಿದ ತಾವರೆ
ಕೊಳೆತಳೆಯದೆ ಅತಿ ಶುಭ್ರವಾಗಿರುವೊಲು
ಇಳೆಯೊಳು ಭೋಗಗಳೆಡೆಯೊಳು ಬಳೆದೊಡೆ
ದೀನನಾಥ! ನಿರ್ಮಲದಿಂದಿರುವುದ ||

ತಿಳಿಬಾನಲಿ ಹಾರಾಡುತೆ ಉಣಿಸನೆ
ಗಳಿಸಿದ ಪಕ್ಷಿಯು ಅದನುಣ್ಣಲುಬಗೆ
ಎಳಸುತ ಗೂಡಿನೊಳಿರುತಿಹ ಮರಿಗಳಿ
ಗೊಲಿದೀಯುತ ಸಂತಸವನು ಪಡೆವೊಲು ||

ಬಡತನದಾಳದಿ ಮುಳುಗಿದನಾಥರ
ಬಿಡದನವರತವು ಸೇವಿಸುತಲಿ ಅವ
ರೊಡಲ ಹಸಿವೆಯನು ನೀಗಿಸುವೊಲು ಮನ-
ಪಡೆಯುವವರ ಸೊಗಕಾಂಬುವ ಕಣ್ಗಳ ||

೧೯೩೮ರಲ್ಲಿ ಪ್ರಕಟಗೊಂಡ ನನ್ನ "ಹೂಗೊಂಚಲು" ಕೃತಿಯಿಂದ

೩೦ ಚಿತ್ತವ್ಯಾತಕೊ ಕಂದಿದೆ

[ರಾಗಃ ಕಾನಡ—ಝಾಪ್ತಾಳ]

ಚಿತ್ತವ್ಯಾತಕೊ ಕಂದಿದೆ
ಪೊತ್ತಿಸು ತಂದೆ
ಚಿತ್ತವ್ಯಾತಕೊ ಕಂದಿದೆ || ಪ ||

ಚಿತ್ತದೊಳಿದೆ ರತ್ನ
ಮುತ್ತು ಮಾಣಿಕ; ಯತ್ನ
ಬತ್ತಿ ಹೊತ್ತದ ಮುನ್ನ
ಎತ್ತಣಪ್ರಭೆ ಚೆನ್ನ? || ೧ ||

ಸುತ್ತು ಕತ್ತಲೆ ಎಂದು
ಚಿತ್ತಲಾಗುವುದುಂಟೆ?
ಮರ್ತ್ಯಲೋಕವಿದೆಂದು
ಮೃತ್ಯು ಅಪ್ಪುವುದುಂಟೆ? || ೨ ||

ಆಳವಾಗಿದೆ ಪಣತೆ
ನೀಳವಾಗಿದೆ ಬತ್ತಿ
ತೈಲ ತುಂಬಿದೊಡೇನು
ಜ್ವಾಲೆ ಮುಟ್ಟದೆ ತಾನು? || ೩ ||

(ಕರ್ಮವೀರ)
೬—೫—೧೯೫೦

೪೧ ಮಾಯೆ *

[ರಾಗ - ಮಾಯಾ ಮಾಳವ ಗೌಳ, ಆದಿತಾಳ]

ಮಾಯೆ ಮಾಯೆಯೆಂದು ತಳುವದೆ ನುಡಿವರು.
ಕಾಯಕ್ಲೇಶವನು ಮುಳಿಯುತ ಹಳಿವರು,
ಧ್ಯೇಯಕರ್ಮಗಳನುಳಿಯದೆ ನಡೆವರು
ಮಾಯೆ ಇದಾವುದಹೊ? ||

ಗಾಳಿಯೊಳುಲಿಯುವ ಸಂತಸ ಸವಿಯರು
ಸಾಲುತಾರೆಗಳ ತತ್ವವ ತಿಳಿಯರು,
ಕೋಲುಮಿಂಚು ಹರಿ ನಗೆಯೆಂಬುದರಿಯರು,
ಮಾಯೆ ಇದಾವುದಹೊ? ॥

ಜನರೊಳು ಹೊಳೆಯುವ ದೇವನ ನೋಡರು.
ನನೆಯಾದ ತನುವಿದು ಮುಗಿವುದ ಮರೆವರು.
ಘನತೆಯಗಿರಿಯಿಂದ ಬೀಳ್ವುದಬಗೆಯರು
ಮಾಯೆ ಇದಾವುದಹೊ? ॥

ನಾನು ನನ್ನದಿದು ಎಂಬುದೆ ಮಾಯೆಯು.
ನೀನು ನಿನ್ನದಿದು ಎಂಬುದೆ ಸತ್ಯವು:
ಮಾನಿತಭಕ್ತರ ತತ್ವವಿದರಿಯರು—
ಮಾಯೆ ಇದಾವುದಹೊ?

* ೧೯೩೮ರಲ್ಲಿ ಪ್ರಕಟಗೊಂಡ ನನ್ನ "ಹೂಗೊಂಚಲು" ಕೃತಿಯಿಂದ.

ಶಿಲ ನಿರಾಶೆ *

[ರಾಗ:- ಬಿಲಹರಿ, ಝಂಪೆತಾಳ]

ಆವ ಹಾಲಾಹಲವನೀಂಟಿದೆನೊ, ಅಲ್ಲಿಹೊದೆ
ದೇವ! ನನ್ನೆದೆಯೊಳೀಪರಿಯ ದಸ್ಸರಿಯು ॥
ಎದೆಯ ಕತ್ತಲೆ ಕಾಡೊಳುರಿಯುವೀ ಕಾಳ್ಗಿಚ್ಚು
ಬದುಕಿನಾನಂದಗಳ ಸುಡುತ ಬರುತಿಹುದು ॥

ಬಗೆಬಾನಬೆಳ್ಳಿ ಹುಬ್ಬಿನಲಿ ಮರೆಯಾಗಿಹುವು
ಬಗೆದುಬೆಂಬಳಿಪುದಳಿಗೆಂಪ್ತುಗಳ ನೆಳಲು ॥
ನೂರಾರು ಆಸೆಗಳನಾಹುತಿಯಗೊಂಡಗ್ನಿ
ನೂರಾರು ನಾಲಗೆಯನೆತ್ತಿಹೊತ್ತಿ ॥
ಪ್ರಳಯ ಯಜ್ಞೇಶ್ವರನ ಕೆಂಗಿಡಯ ಕೊನೆಮುಟ್ಟಿ
ತಳವರಿಸಿ ತಂಗಿತೆನ್ನೆದೆಯನೊತ್ತಿ ॥

ಬಲ್ಪಿರಿಯ ಘೋರಗರ್ಜನೆಯೊ? ಸಿಡಿಲಸಿಂಹಸ್ವನಿಯೊ?
ಕತ್ತಲೆಯ ನೃತ್ಯಮೌನಚ್ಛಾಯೆಯೊ?
ನಡುಗುತಿದೆ ಅಂಗಾಂಗ, ಹೃದಯಹಮ್ಮೈಸುತಿದೆ
ತಡೆವುದೆಂತೋ ಕಾಣೆನೀ ರೌದ್ರವ ॥

೧೯೩೪ ಫೆಬ್ರುವರಿ
ಬೆಂಗಳೂರಲ್ಲಿ

* "ಚೆಂಗಲವೆ" ಯಿಂದ

೪೩ ಗುರುದೇವ *

[ರಾಗಃ– ಮುಖಾರಿ ಝಂಪೆತಾಳ]

ನೀನಲ್ಲದಾರುಂಟು ಗತಿಯೆನಗೆ ಗುರುದೇವ
ನೀನೆ ಸರ್ವಸ್ವವೆನಗೇ ‖ ‖ ಪ ‖
ಪೆತ್ತತಾಯಿಯು ನೀನೆ ಹೊತ್ತ ತಂದೆಯು ನೀನೆ
ಮತ್ತೆನಗೆ ನೆರವಾದ ಬಂಧು ನೀನೆ ‖
ಉತ್ತಮೋತ್ತಮನಾದ ಸದ್ಗುರುವು ನೀನೆನಗೆ
ನಿತ್ಯಾತ್ಮ ನಿರ್ಮಲಾನಂದ ನಿಧಿಯೇ ‖ ೧ ‖
ಪ್ರಣವಮಂತ್ರದ ಮೂಲ ಅರುಹಿದವ ನೀನೆನಗೆ
ಪ್ರಣುತ ಶಾಸ್ತ್ರದಸಾರ ಸವಿಯಿತ್ತಿರವೇ ‖
ವಿನುತ ಪ್ರಾಣಾಯಾಮದಿಂದಲೀ ತನುಮನವ
ಮಣಿಸಿದಾ ಪ್ರಣವ ಸ್ವರೂಪ ನೀನೆ ‖
ನೂರಾರು ಚಿಂತೆಗಳ ನೂರಾರು ದಿಕ್ಕಿಗೆ
ತೂರಿಕೊಟ್ಟುವೀ ಬ್ರಹ್ಮಾಂಡ ಕೋಟಿಗಳ ‖
ತೋರುತಿನ್ನೆಯು ಮನದ ನಯನಕಪ್ರಾಕೃತದ ಅ–
ಪಾರತೆಯ ದಿವ್ಯ ದರ್ಶನವನಿತ್ತೆ ‖

೧೯೩೫ನೇ ಎಪ್ರಿಲ್
(ಕಪೋತಗಿರಿ ಗುಹಾವಾಸದಲ್ಲಿ)

* ನನ್ನ “ಜಿಂಗಲಪೆ”ಯಿಂದ

೪೪ ವಿಧಿಗೆ *

(ರಾಗ: — ಅಠಾಣಾ ಝಂಪೆತಾಳ)

ವಿಧಿಯೆ! ನೀನೇಕೆನ್ನನಿಂತು ಕಾಡಿಸುವೆ
ಇದೊ ಕೊಟ್ಟೆನಿದೊ ಬಿಟ್ಟೆನೆಂದು ಬೇಡಿಸುವೆ? ||
ನಳ, ಹರಿಶ್ಚಂದ್ರ ರಿಪುದಮನ ಧರ್ಮಜರು
ಗೆಲಲಾರದೆಯೆ ಕಾದಿ ಸೋಲನೊಪ್ಪಿದರು ||

ಅಂದಿನೊಲು ನೀನಿಂದು ಅಜಿತನಾಗಿರುವೆ!
ಅಂದಿನಂದದಿನಿಂದು ಹಸಿದೆನಿಂದಿರುವೆ!
ಏನಿದದ್ಭುತಕಾಯ ವಿಧಿ ನಿನ್ನ ಮಾಯ!
ಸೃಷ್ಟಿಕೋಟಿಗಳ ತುತ್ತುವ ನಿನ್ನುಪಾಯ! ||

ಗಂಭೀರಸಾಗರ ಅನಂತ ಗಗನಗಳ
ರವಿಶಶಿಗ್ರಹತಾರೆ ಕೋಟಿಕೋಟಿಗಳ
ಒಂದೆನೋಟದಿ ನೋಡಿ ಒಂದೆ ತುತ್ತಾಗಿ
ನುಂಗುವಬ್ಬರವೇನೊ ಎಲೆರುದ್ರಭೋಗಿ! ||

* ೧೯೨೦ರಲ್ಲಿ ಪ್ರಕಟಗೊಂಡ ನನ್ನ "ಚೆಂಗಲವೆ" ಕೃತಿಯಿಂದ
೧೯೧೪ರಲ್ಲಿ ಬೆಂಗಳೂರಲ್ಲಿ ಬರೆದದ್ದು.

೩೫ ಗುರುದರ್ಶನ

[ರಾಗ:- ಮಧ್ಯಮಾವತಿ, ಛಾಪು ತಾಳ]

ಗುರು ನಿನ್ನ ದರ್ಶನದಿಂದ ಪಾವನನಾದೆ
ಗುರುನೀನೆ ಸಲಹೊ ತಂದೆ ‖ ಪ ‖
ಸರುವ ತಾಪಗಳನ್ನು ಪರಿಹರಿಸುವ ಶಕ್ತಿ
ಮೂಲ ನೀನೆಂದು ಬಂದೆ ‖ ಅ ಪ ‖

ಗುರುಕರುಣಾಮೃತವೆನ್ನ ಹೃತ್ಕಲಶವ
ಸಂತತ ತುಂಬಿರಲಿ
ಗುರುಜ್ಞಾನರವಿಬಿಂಬವೆನ್ನ ಚಿದಾಕಾಶ
ವನೆ ಚುಂಬಿಸುತ್ತಿರಲಿ ‖

ಗುರುಪಾದ ತಲೆಶಿಲೆಯಲ್ಲಿ ಕಮಲವಾಗಿ
ನಳನಳಿಸುತ್ತಿರಲಿ
ಗುರುಹಸ್ತ ಮಸ್ತಕಮಂಗಳಮಣಿಮುದ್ರೆ
ಯಾಗಿ ರಂಜಿಸುತಿರಲಿ ‖

ಎಲ್ಲೆಲ್ಲು ಅಲೆದಾರು ಕಾಣಲಿಲ್ಲೈ ತಂದೆ
ನಿನ್ನಂಥ ಯತಿಮೂರ್ತಿಯಾ ‖
ಫುಲ್ಲ ಪದ್ಮದಂತೆ ಅರಳಿದ ಮುಖಕಾಂತಿ
ದಿವ್ಯಜ್ಞಾನದ ಸ್ಫೂರ್ತಿಯಾ ‖

ಇಲ್ಲಿ ರಮ್ಯಾರಣ್ಯ ಗಿರಿದರಿ ಜಲಪಾತ
ವಿಸ್ತಾರವಾದಂಥ ಬಯಲು
ಇಲ್ಲಿ ಮಲ್ಲಿಗೆ ಜಾಜಿ ತರುಲತಾವನರಾಜಿ
ನಂದನವನದಂಥ ಸುಯಿಲು ||

ಭಕ್ತಿ ಜ್ಞಾನದವಲ್ಲಿ ಪುಷ್ಪಿಸಿರುವುವಿಲ್ಲಿ
ಆನಂದಗಂಧ ಚೆಲ್ಲಿ ||
ಭಕ್ತಿವಿಹಂಗಮ ಪುಣ್ಯಪಾದಪ ನೀಸ
ತೊಟ್ಟಿಹೆ ಮುಕ್ತಿನಲ್ಲಿ ||

ಕವಿಗಳು

ಬೆಳಕಿನ ಬೀಜಗಳು ನಾವು—
ನಮಗೆಲ್ಲಿಯ ಸಾವು?
ಶೋಕತಮೋಲೋಕಕಿಳಿದು,
ತಿಳಿವಿನ ಸಸಿಯಾಗಿ ಮೊಳೆದು,
ಸುಖವ ತರುವ ಕಲ್ಪತರುವ
ರೂಪ ತಳೆವೆವು—
ಬೆಳಕಿನಫಲವಿತ್ತು ಕತ್ತ—
ಲೆಯನು ಕಳೆವೆವು!

೪೬ ಎನಿತು ರಮ್ಯವೊ ಹರಿಯ ಸ್ವರೂಪ

(ರಾಗ:- ಕೇದಾರಗೌಳ)

ಎನಿತು ರಮ್ಯವೊ ಹರಿಯ ಸ್ವರೂಪ ॥
ಎನಿತು ಸೌಮ್ಯ ಮನಮೋಹರವೊ! ॥ ಅ ॥

ಹಸುರು ಪಚ್ಚೆ ಸಸ್ಯಶಾಲು ಪೀತಾಂಬರ
ಹಸನಾದ ತಿಳಿನೀಲ ಗಗನ ಶ್ರೀಮುಡಿಯು
ಶಶಿತಾರೆಗಳೆಂಬ ಮುತ್ತು ಮಾಣಿಕ್ಯದ
ಮಿಸುಪಹಾರ ಕಂಧರನ ಶ್ರೀಧರನ ॥ ೧ ॥

ತಳತಳಿಸುವ ಕೋಲ್ಮಿಂಚಿನಂಚಿನ
ತೆಳುವಾದ ಮುಗಿಲಗೋಪುರದೊಡ್ಡಿನ
ಹೊಳೆವುಡುಗಣದ ಕಿಂಕಿಣಿಯ ಕಾಲ್ಗೆಜ್ಜೆಯು
ತಳೆದು ನರ್ತಿಸುವ ನಳಿನನಾಭನ ॥ ೨ ॥

ಆಟಪಾಟಲೆಂದು ಮಾಡುವ ಮುಸುಕಿನ
ನಾಟ್ಯರೂಪದೀ ಸುಂದರಧರೆಯು
ಕೋಟ್ಯನುಕೋಟಿ ಜೀವಿಗಳೊಳು ನಗುತಿಹ
ನಾಟಿ ಇಲ್ಲದ ಮಧುರ ಮಾಧವನ ॥ ೩ ॥

೪೭. ಅಲ್ಪಕಿಂತಲ್ಪ ನಾನು

(ರಾಗಃ– ದೇಶಗಾಂಧಾರ)

ಅಲ್ಪಕಿಂತಲ್ಪ ನಾನು ದೇವಾ
ಕಲ್ಪನಾತೀತ ನೀನು ॥ ಪ ॥

ಅಣುವಿನೊಳನಂತ ಬ್ರಹ್ಮಾಂಡಗಳನರಳಿಸುತೆ
ಅಣುವೆನ್ನ ಕಲ್ಪನಾಳಿಯ ಕೆರಳಿಸುತೆ ॥
ಅಣುಮಹತ್ತುಗಳ ತುಲನೆಯ ಮಾಳ್ಪಧೈರ್ಯವನು
ಅನುಗೊಳಿಸುತಲ್ಪನಾದೆನ್ನನುಬ್ಬಿಸುವೆ ॥

ಜಿನುಗುಮಳೆವನಿಯು ಹೇರಾಳಹೊಳೆಯಾಗುವೊಲು,
ಕಣಗಣಂಗಳಿನದ್ರಿ ಶಿಖರವಾಗುವೊಲು ॥
ಮಿನುಗುವಮೃತದ ಬಿಂದುಸಂದೋಹವೊಂದಾಗೆ
ಅನುಪಮಸುಧಾಂಬೋಧಿಯೆಂದೆನಿಸದೆ? ॥

ವಿಶ್ವಸೃಷ್ಟಿಯ ಮೂಲ, ಕಣ್ಗೆ ಕಾಣದ ಕಾಲ
ಶ್ವಸಿತಲವ ಕಾಲಕಣದಮಿತಲೀಲೆ ॥
ವಿಶ್ವಮೋಹನಮೌನ ಹೃದಯಪದ್ಮಾಸೀನ
ವಿಶ್ವಮಾಯಾಬ್ಧಿಗಲ್ಪಗಳಲೆಯ ಮಾಲೆ ॥

೬–೯–೧೯೫೦

೪೮ ಏನಿದು ಸುಸ್ವಪ್ನ

[ರಾಗಃ— ಮೋಹನ ರೂಪಕತಾಳ]

ಏನಿದು ಸುಸ್ವಪ್ನ ಮೋಹನ
ಆನಂದದ ಕಾಮಧೇನು ಸುಧೆಯ ಮೋಹನ ॥ ಪ ॥

ಕಾರ್ಗಾಲದ ಕಾರ್ಮುಗಿಲುರಿ
ಭೋರ್ಗರೆಯುತ ಗುಡುಗುತಲಿರೆ,
ಕಗ್ಗತ್ತಲು ಕವಿತರುತಿರೆ
ಭಗ್ಗನೆ ಬೇಸಗೆ ಹಬ್ಬಿತು—
    ಬುವಿಬಾನ್ಗಳತಬ್ಬಿತು!

ಉರಿಬಿಸಿಲಲಿ ತಿರೆಯುರಿದಿರೆ
ಕೆರೆತೊರೆನೀರ್ ನಿಡುಬತ್ತಿರೆ
ಮರಮೃಗಜನ ಕೊರಗುತ್ತಿರೆ
ನಡುಬೇಸಗೆ ನೀರಾಯಿತು—
    ಜಡಿಮಳೆಯುದೊ ಸುರಿಯಿತು! ॥

ತಾಪಂಗಳ ಕೂರ್ಗಣೆ ಕಡು
ಕೋಪದಿಂದಲಸುಕಂಗೆಡೆ
ಆಪದ್ಬಾಂಧವ ತೆರೆಸಿದ
    ಪುಣ್ಯದ ಕಣ್ ಕಂಡಿತು
ಶಾಶ್ವತ ಸುಖ ಉಂಡಿತು ॥

೧-೧೦-೧೯೫೦

೪೯ ಸಹ್ಯಾದ್ರಿಯ ಕರೆ

ರಾಗಃ- ಸಿಂಹೇಂದ್ರಮಧ್ಯಮ- ಅಥವಾ ಮೋಹನ
ತಾಳಃ- ಮಿಶ್ರಛಾಪು

ಕರೆವಳಿನ್ನನು ಮಾತೆ ಸಹ್ಯಾದ್ರಿ ಸುಖದಾತೆ
ಗಿರಿದರಿ ಜಲವ್ರಾತೆ ಪ್ರಕೃತಿ ಪ್ರಖ್ಯಾತೆ ॥ ಪ ॥
ಭರಿತ ಸಂಗೀತ ವಿನೋದಾನುಭೂತೆ
ನಿರತಿಶಯಾನಂದರಸಪರಿಪೂತೆ ॥ ಅ ಪ ॥

ಬೆಟ್ಟಬೆಟ್ಟಗಳಲ್ಲಿ ತರತರತರುವಲ್ಲಿ
ಹುಟ್ಟಿಹಬ್ಬಿವೆ ಪುಷ್ಪಗಂಧವ ಚೆಲ್ಲಿ ॥
ದಟ್ಟಡವಿಗಳಲ್ಲಿ ಹೆಮ್ಮರಶಿರದಲ್ಲಿ
ಕಟ್ಟಿಕೊಂಡಿವೆ ಸವಿಜೇನಿನ ಜಲ್ಲಿ ॥

ಕಾಡಮೌನವನುಂಡ ಹಾಡುಹಕ್ಕಿಯು ತಂಡ
ಗಾಥಾನಂದದ ನಾದ ಮಾಧುರ್ಯಪಿಂಡ ॥
ಹಾಡುತಲಿವೆ ವೇದ ಧರ್ಮಕರ್ಮದ ಕಾಂಡ
ಬೀಡುಬಿಟ್ಟಿಹ ನಾಡು ಈ ಸಹ್ಯಖಂಡ ॥

ಮುಂದೆ ಅಡಿಕೆತೋಟ ಹಿಂದೆ ಬೆಟ್ಟದ ಬೇಟ
ಚಂದವಾಗಿಹ ಕೊಳ ತಿಳಿನೀರನೋಟ ॥
ಸುಂದರಿ ರಾಧೆಯ ಸೆರೆಗೊಂಬ ಸುಖದಾಟ
ಸುಂದರಧರನಾತ್ಮಯೋಗದ ಕೂಟ ॥

ಗಂಡುಹೆಣ್ಣುಗಳಿಲ್ಲಿ ಹೂವುಮಲ್ಲಿಗೆ ಬಳ್ಳಿ
ಉಂಡುಟ್ಟು ಸುಖಿಪರು ರತಿಕಾಮರಿಲ್ಲಿ
ಪುಂಡರ ತುಂಡರಿಸುವ ವೀರತನದಲ್ಲಿ
ಕಂಡಲೆವರು ಭೀಮವಿಕ್ರಮರಿಲ್ಲಿ ||

ಮೊಗ್ಗೆ ಮೊಗ್ಗೆಗಳೆಲ್ಲ ಹಿಗ್ಗಿನ ಸವಿಸೊಲ್ಲ
ಬುಗ್ಗೆ ಬಾಯ್ದೆರೆದವೊಲರಳಿರ್ಪುವಿಲ್ಲಿ ||
ತಗ್ಗುದಿನ್ನೆಗಳೆಲ್ಲ ಸುಗ್ಗಿಯಾಗಿವೆಯಲ್ಲ
ಉಗ್ಗಡಿಪುದು ಸೊಗದೊಸಗೆ ತುಂಬಿಲ್ಲಿ ! ||

ದೂರದಿಂಬಂದಂಥ ಪಾರಮಾರ್ಥರಿಗೆಂಥ
ಸಾರೋಪಚಾರ ಸದ್ಧರ್ಮವಿಚಾರ ||
ವಾರಿಜವದನೆಯರಾನಂದಸದನೆಯರಾ
ತೋರುವ ಸರಸವಪಾರಗಂಭೀರ ||

ತಳಿರ ತುಟಿಯಕಚ್ಚಿ ಕೋಗಿಲೆ ಮನಬಿಚ್ಚಿ
ಲಲಿತರಾಗವ ಕುಕಿಲುವುದಿಲ್ಲಿ ಮೆಚ್ಚಿ ||
ಫಲಸಾರವನೆ ಹೀರಿ ಅರಗಿಳಿ ಮದವೇರಿ
ಗಳಹುತಿಹುದು ಕಾಮಸೂತ್ರವನೆಚ್ಚಿ ||

ಎಂಥ ಅಕ್ಷಯಪಾತ್ರ ! ಎಂಥ ಪುಣ್ಯದ ಕ್ಷೇತ್ರ
ಎಂಥ ಸದಾನಂದ ಜೀವನಸೂತ್ರ ! ||
ಎಂಥ ವಿಚಿತ್ರ! ಪ್ರಚಂಡ ಪರ್ವತಪಂಕ್ತಿ
ತಿಂಥಿಣಿ ದಂಡೆದ್ದು ಕಾಯುವೀ ಮಧುಪಾತ್ರ ||

ಸುಳ್ಳುಸಟೆಯು ಸಲ್ಲ ಮರೆಮೋಸವಿನಿತಿಲ್ಲ
ಒಳ್ಳೆಯ ಜನರೆಲ್ಲ ರಸಿಕನೇಸೊಲ್ಲ ||
ಅಲಸಿ. ಮೆಣಸುಗೋಟಡಿಕೆ ಸೀಸಾಲಸೆಲ್ಲ
ಯಾಲಕ್ಕಿ, ರಂಭೆ, ನಿಂಬೆಯು ಸಸ್ಯಕುಲವೆಲ್ಲ! ||

ಪೊಂಬಿಸಿಲೆಸೆದಿದೆ, ತುಂಬಿ ಚುಂಬಿಸುತಿದೆ
ತುಂಬುದಾವರೆಯಿದೆ ಪೂಸರವೇನಿಸುದೆ? ||
ತುಂಬಿ ತುಳುಕಿದೆ ಯಾನಂದವು ಘುಸುಘೆ
ತುಂಬಿ ಹರಿಯುದುಂತೆ ಕವಿಭಾವವಿಹುದೆ? ||

❀ ಶಿರಸಿ ಪ್ರಾಂತ್ಯದ ತ್ಯಾಗ್ಲಿಯಲ್ಲಿ ತಾ. ೧೧-೧೯೫೦ನೇ ಇಸ ಕೂಡಿದ ಯಕ್ಷಗಾನ ನಾಟಕೋತ್ಸವಕ್ಕಾಗಿ ಬರೆದದ್ದು.
೧೫. ೧೧. ೧೯೫೦

ಹುಟ್ಟಿನ ಬಟ್ಟಲು

(ಸಾಂಗತ್ಯ)

ಹುಟ್ಟಿನ ಬಟ್ಟಲಿಂದಲೆ ಬಾಳಭಾಂಡೆಯು
ಅನುಭವಂಗಳಸಾರವಳೆಯೆ
ಹುಟ್ಟಿದ ಜೀವಗೇತಕೆ ಸಿಹಿಕಹಿಯೆಂಬ
ರುಚಿಯುಗೊಡವೆ, ವೇಳೆಗಳೆಯೆ?
ಬಟ್ಟಲಿಗಂಟದೊಲೆಚ್ಚರದಿಂದಲೆ
ಅಕ್ಕರಳೆಯುತ ಸವಿಸವೆಯೆ.
*ಒಟ್ಟೆಯಾಗಲು, ಹುಟ್ಟುಸಾವಿನ ಸಾಗರ
ಗುಟ್ಟೆಂಪೆತ್ತುವನದ ಸವಿಯೆ!

* ಒಟ್ಟೆ = ತೂತು (ಸಾವು)

೫೦ ಪುಷ್ಪಾಂಜಲಿ *

[ರಾಗಃ– ಲಲಿತ, ಆದಿತಾಳ]

ಅರಳಿದ ಹೂಗಳು, ಅರಳದವುಗಳು,
ಅರೆಬಿರಿದವು, ಬಲುಬಾಡಿ ಬಗ್ಗಿಹವು || ಪ ||
ತಳಿರೆಳೆಬೆರಳೊಳು ಕೊಯ್ದು ಕೋದಿಹೆನು
ತಳಿರಡಿ ನಿನ್ನವು ಇವಕೊಪ್ಪಿಸಿಹೆನು || ಅಪ ||

ಮಲ್ಲೆಲರೊಂದದು ಪರಿಮಳವಿದರಿಂ
ತಲ್ಲಣಿಸದೆ ನಿನ್ನೆಡೆಗೊಯ್ಯುತಿದೆ
ಸಲ್ಲಲಿತವು ಎಂದಾದಡೆಕೈಕೊಳು
ಇಲ್ಲವಾದೊಡಿವ ದೂರಿರಿಸೈದೊರೆ ||

ಎಲ್ಲಿಯೊ ಕಾಡೊಳು ಅರಳಿದುವಲ್ಲವು,
ಮಲ್ಲಳಿನುಣ್ಣುಟಿಗೊಪ್ಪಿದುವಲ್ಲವು,
ಎನ್ನಯ ಮನೆಯಂಗಳದಾಲತೆಯವು
ನಿನ್ನ ಪೂಜೆಗೋಸುಗ ಅರಿಸಿದವು ||

ಇವುಗಳನಿತ್ತಿಹ ಲತೆಗೆರಚಿದ ಜಲ
ಅವಿರತ ಧಾರೆಯದಾಗದಿರ್ದಡೇಂ?
ಎರಚಿದ ಹನಿಯೊಂದೆರಡವು ನಿರ್ಮಲ
ಸರಸಿಜು ಸಲಿಲದಿ ತಂದವು ತಂದೆ ||

* ೧೯೩೮ರಲ್ಲಿ ಪ್ರಕಟಗೊಂಡ ನನ್ನ "ಹೂಗೊಂಚಲು"
ಕೃತಿಯಿಂದ.

೫೧ ಅಂತರ್ಮುಖಿ *

[ರಾಗಃ— ಭೈರವಿ]

ಹುಡುಕು ಒಳಗೆ ಹುಡುಕು
ಬಿಡು ಬಾಹ್ಯದ ತೊಡಕು ‖ ಪ ‖
ಕಣ್ಕಿವಿಗಳ ಹೊರಹರಿತವ ನಿಲಿಸಿ
ಸ್ವರ್ಣವರ್ಣದೊಳಬೆಳಕನೆ ಬಲಿಸಿ ‖ಅಪ‖

ಕರ್ಮಕರ್ಕಶದ ಗ್ರಂಥಿ ಸಡಿಲಿಸಿ,
ಧರ್ಮದಯಾಮೃತವನೆ ಸಿಂಪಡಿಸಿ,
ಮರ್ಮದಮಲಿನತೆಗಳ ಹೊರವಡಿಸಿ,
ನಿರ್ಮಮತೆಯ ಸೌಗಂಧವ ಧರಿಸಿ ‖ ೧ ‖

ಮುತ್ತು ರತ್ನನಿಧಿ ಮೂಲಾಧಾರ
ಸುತ್ತುತ ಕಾದಿದೆ ಸರ್ಪಾಕಾರ,
ಚಿತ್ತವೃತ್ತಿ ದಿಗ್ಬಂಧನದ್ವಾರಾ
ಎತ್ತಿಕೊ ಶಾಶ್ವತಸಂಪದಪಾರಾ ‖ ೨ ‖

* ೧೬-೧೦-೫೦ನೇ ದಿನ ಶಿರ್ಸಿ ಸಮೀಪದ ಕೊಳಗಿ ಬೀಸಿನಲ್ಲಿ ಅವಧೂತರನ್ನು ದರ್ಶನಮಾಡಿ ಬಂದಮೇಲೆ ಬರೆದದ್ದು.

೫೩ ಜಯಮಂಗಳ ಮಾಹೇಶ್ವರಿ

[ರಾಗಃ– ಹಿಂದೋಳ]

ಜಯ ಜಯ ಜಯ ಭುವನೇಶ್ವರಿ
ಜಯ ಮಂಗಳ ಮಾಹೇಶ್ವರಿ
ಜಯ ಜಯ ಭಕ್ತಾನಂದ
ಭಯಹಾರಿಣಿ ವಂದೇ ||

ತ್ರಿಪುರಾಂತಕನರ್ಧಾಂಗೀ
ರಿಪುರಾಕ್ಷಸರುಧಿರಾಂಗೀ
ಜಯ ಜಯ ಜಯ ಮಹಮ್ಮಾಯೆ
ಕಾಪಾಡೌ ಮಹಾತಾಯೆ ||

ಜಯ ಸಚರಾಚರ ಭರಣೆ
ಜಯ ವಾಙ್ಮಯರಸಾಭರಣೆ
ಜಯಾನಂದಮಯಸ್ಫುರಣೆ
ಕಾಪಾಡೌ ನಿರ್ಝರಣೆ ||

“ರಾಘಸ್” [ಕಲಾವಿಲಾಸ]

ಪಾಂಡೇಶ್ವರಕೃತ ಪುಟ ೮೦, ಬೆಲೆ ೧ ೮-೦

ಪ್ರಕಾಶಕರು:—

ಸರ್ವೋದಯ ಸಾಹಿತ್ಯಮಾಲೆ ಹುಬ್ಬಳ್ಳಿ.

ಕೆಲವು ಅಭಿಪ್ರಾಯಗಳು ಮಾತ್ರ

“ಇದುವರೆಗೆ ಕವನಸಂಗ್ರಹಗಳನ್ನಿತ್ತು ಕನ್ನಡಿಗರ ಪ್ರೀತಿಗೆ ಪಾತ್ರರಾಗಿರುವ ನುರಿತ ಪತ್ರಿಕೋದ್ಯಮಿ ಶ್ರೀ ಪಾಂಡೇಶ್ವರರು ಈಗ ತಮ್ಮ ಮೊತ್ತಮೊದಲಿನ ಗದ್ಯಕೃತಿ “ರಾಘಸ್”ನ್ನು ಜನತೆಯಮುಂದಿಟ್ಟಿದ್ದಾರೆ. ಇದರಲ್ಲಿ ವಿವಿಧ ಕಲೆಗಳನ್ನು ಕುರಿತು ೧೦ ಲೇಖನಗಳಿವೆ.... ಎಲ್ಲ ಕಲಾವಿದರೂ ಕಲಾವತಿಯರೂ ಕಲಾಪ್ರೇಮಿಗಳೂ ‘ರಾಘಸ್’ನ್ನು ಓದಲೇಬೇಕು.

ವಿಶಾಲಕರ್ನಾಟಕ ಹುಬ್ಬಳ್ಳಿ.

೨೬—೩—೫೦

“ಶ್ರೀಯುತರಾದ ಪಾಂಡೇಶ್ವರ ಗಣಪತಿರಾಯರು ಅರಿತ. ನುರಿತ ಸಾಹಿತಿಗಳು; ಒಳ್ಳೆಯ ಪಾಂಡಿತ್ಯ, ಸದಭಿರುಚಿಸಂಪನ್ನರು.... ಹತ್ತು ಪ್ರಬಂಧಗಳು ‘ರಾಘಸ್’ನ್ನು ಅಲಂಕರಿಸಿವೆ..... ಇದು ಅವರ ಕಲಾಮರ್ಮಜ್ಞತೆಗೆ ಒಂದು ಉತ್ತಮ ನಿದರ್ಶನ.... ಪ್ರತಿಯೊಂದು ಮಾತಿಗೂ ಶಾಸ್ತ್ರದ ಅಥವಾ ಕಾವ್ಯದ ಆಧಾರವನ್ನು ಕೊಟ್ಟಿರುವುದು ಅವರ ಅಭ್ಯಾಸದ ಆಳವನ್ನೂ ವಿವೇಚನೆಯ ಗಾಂಭೀರ್ಯವನ್ನೂ ಎತ್ತಿ ತೋರಿಸುತ್ತದೆ..... ವಿಚಾರಗಾಂಭೀರ್ಯದಿಂದ ಕೂಡಿದ ಹಲವಾರು ವಿಷಯಗಳ ಸುವಿವೇಚನೆಯನ್ನು ‘ರಾಘಸ್’ ಅಥವಾ ‘ದಿವ್ಯ ಆಹಾರ’ವೆಂದು ಕಲೋಪಾಸಕರಿಗಿತ್ತು ಕೃತಕೃತ್ಯರಾದ ಶ್ರೀ ಗಣಪತಿರಾಯರು ಖಂಡಿತವಾಗಿಯೂ ಅಭಿನಂದನೀಯರೇ ಸರಿ.”

[illegible]-೩-೧೯೫೦ **ಕರ್ಮವೀರ** ಹುಬ್ಬಳ್ಳಿ

"ಈ ಸಂಗ್ರಹದಲ್ಲಿ ಚಿತ್ರಕಲೆ, ಶಿಲ್ಪ, ಇವೆರಡನ್ನು ಬಿಟ್ಟು ಬಹುತರ ಉಳಿದೆಲ್ಲ ಕಲೆಗಳ ವಿಷಯದ ನಿಬಂಧಗಳಿವೆ. ಶ್ರೀ ಗಣಪತಿರಾಯರ ಅಭಿಪ್ರಾಯಗಳು ಪಾಂಡಿತ್ಯದ ಹಿನ್ನೆಲೆಯಮೇಲೆ ನಿಂತವುಗಳೂ, ಸಮತೋಲ ಉಳ್ಳವೂ ಆಗಿವೆ. ಪ್ರತಿಯೊಂದು ಕಲೆಯ ವರ್ಧನೆಗಾಗಿ ಸೂಚನೆಗಳನ್ನು ಕೊಟ್ಟಿದ್ದಾರೆ; ಪ್ರಾಚೀನ ತತ್ವಗಳ ಸರ್ವಮಾನ್ಯತೆಯನ್ನು ತೋರಿಸಿದ್ದಾರೆ. ಸುಧಾರಣೆಯ ಮಬ್ಬಿನಲ್ಲಿ ಪರಂಪರಾಗತವಾದ ಕಲೆಗಳ ಸೂಕ್ಷ್ಮತೆ ಹಾಗೂ ಲಾಲಿತ್ಯವನ್ನು ಕಳೆದುಕೊಳ್ಳದಿರಲು ಎಚ್ಚರಿಸಿದ್ದಾರೆ....."

೨-೪-೧೯೫೦ **ಕರ್ನಾಟಕ ವೈಭವ** ವಿಜಾಪುರ.

"........ಶ್ರೀಮಾನ್ ಪಾಂಡೇಶ್ವರರು ಕನ್ನಡ, ಸಂಸ್ಕೃತ, ಇಂಗ್ಲಿಷ ಸಾಹಿತ್ಯಗಳನ್ನು ಅಭ್ಯಸಿಸಿ ಪರಿಪಕ್ವವಾಗಿದ್ದರೂ ಏಕಾಂತಜೀವಿಯಾಗಿರುವ ತಪಸ್ವಿಸಾಹಿತಿಗಳಾಗಿದ್ದಾರೆ. ಅಂತಹರ ಜೀವನವೂ ಜ್ಞಾನವೂ ಕನ್ನಡಿಗರ ಅಲಕ್ಷದಿಂದ ಕಾನನದ ಕುಸುಮದಂತೆ ಬಾಡದಹಾಗೆ ನೋಡಿಕೊಳ್ಳುವದು ಕನ್ನಡಿಗರ ಕರ್ತವ್ಯವಾಗಿದೆ. ಈ ಸಂಗ್ರಹದಲ್ಲಿ.... ಮುಂತಾದ ಅನೇಕ ಸಾಹಿತ್ಯಾಂಗಗಳ ವಿವೇಚನೆಯನ್ನು ವಿದ್ವತ್ತಾಪೂರ್ಣವಾಗಿ ಮಾಡಿದ್ದಾರೆ.... ಸಾಹಿತ್ಯದ ಸಾರ್ವಾಂಗೀಣ ಘನತೆಯ ಮನವರಿಕೆ ಮಾಡಿಕೊಳ್ಳಲು ಈ ಸಂಗ್ರಹವು ಅತ್ಯಂತ ಸಹಾಯಕವಾಗಿದೆ....." **ಕಲಿಯುಗ** ೧೯೫೦ ಮೇ

"ಇವರು ನಿಜವಾಗಿಯೂ ಕನ್ನಡದ ಉತ್ಕೃಷ್ಟ ಲೇಖಕರಲ್ಲೊಬ್ಬರು ಅವರ "ಚೆಂಗಲವೆ" ಕವನ ಸಂಗ್ರಹವು ಕನ್ನಡಕ್ಕೊಂದು ಅನುಪಮ ಕಾಣಿಕೆ. ಪಾಂಡೇಶ್ವರರು ವಿಚಾರವಾದಿಗಳು; ಯಾವದನ್ನೂ ಪ್ರತ್ಯಕ್ಷ ಜೀವನದಿಂದ, ಅಭ್ಯಾಸದಿಂದ ಕಂಡು ಅನುಭವವನ್ನು ಆಳಮಾಡಿಕೊಂಡವರು. ಮೇಲಿ ಮೇಲೆ ಮೆರೆದು ಹೆಸರು ಸಂಪಾದನೆಮಾಡಬೇಕು ಎಂಬ ಕುಲದವರಲ್ಲ......, "ರಾಧಸ್" ಒಂಬತ್ತು ವಿಚಾರಪೂರ್ಣ ಲೇಖನಗಳ ಸಂಗ್ರಹ. ಲೇಖನಗಳು ಆಳವಾಗಿವೆ, ಅಭ್ಯಾಸಪೂರ್ಣವಾಗಿಯೂ ಇವೆ..... 'ರಾಧಸ್' ಸಂಗ್ರಹ ಯೋಗ್ಯವಾದ ಗ್ರಂಥ." ೨೩-೪-೧೯೪೯ **ಪ್ರಜಾಮತ** ಬೆಂಗಳೂರು

"ಇದರಲ್ಲಿ.... ಮುಂತಾದ ವಿಚಾರಪೂರ್ಣ ಲೇಖನಗಳಿವೆ. ಸಾಹಿತ್ಯಾಭ್ಯಾಸಿಗಳೂ ಸಹೃದಯರೂ ಮನನಮಾಡಬೇಕಾದ ಅನೇಕಾನೇಕ ಅಂಶ

ನಸು ಇಲ್ಲಿವೆ. "ಚೆಂಗಲವೆ" ಮೊದಲಾದ ಪದ್ಯಕೃತಿ ರಚಿಸಿದ ಪಾಂಡೇಶ್ವರ ರಾಯರು ತಮ್ಮ ಈ ಪ್ರಥಮ ಗದ್ಯಕೃತಿಯಲ್ಲೂ ಯಶಸ್ವಿಯಾಗಿದ್ದಾರೆ."

೧೩-೪-೧೯೫೦ **ದೇಶಬಂಧು** ಬೆಂಗಳೂರ

"ವಿವೇಕಾನಂದ ಚರಿತಂ" "ಚೆಂಗಲವೆ" ಇತ್ಯಾದಿ ಕವನಸಂಗ್ರಹಗಳಿಂದ ಪ್ರಸಿದ್ಧರಾದ್ದ, ನುರಿತ ಪತ್ರಿಕೋದ್ಯೋಗಿ ಶ್ರೀ ಪಾಂಡೇಶ್ವರರ ಈ ಮೊತ್ತಮೊದಲ ಗದ್ಯಕೃತಿ ಕರ್ನಾಟಕದ ಕಲಾರಂಗದ ಕುರಿತು ಬರೆದ ಹತ್ತು ಪ್ರಬಂಧಗಳ ಸಂಗ್ರಹ.... ಪತ್ರಿಕಾವೃತ್ತಿ ಮತ್ತು ವ್ಯವಸಾಯದ ಕುರಿತು ಬರೆದ ಪ್ರಬಂಧವಂತೂ ಬಹು ಚೆನ್ನಾಗಿದೆ. "ಸಾಹಿತ್ಯಕರು ಮತ್ತು ಜನಜೀವನ" "ವಿಮರ್ಶೆ" ಇತ್ಯಾದಿ ಪ್ರಬಂಧಗಳು ಓದಲರ್ಹವಾಗಿವೆ. ಶ್ರೀ ಗಣಪತಿರಾಯರು ಕಲಾಶ್ರೀಗೆ ಅರ್ಪಿಸಿದ ಈ ಕಿರಿಯಕಾಣಿಕೆ ಸಂಗ್ರಹಿಸಲು ಯೋಗ್ಯವಾಗಿದೆ."

೫-೫-೧೯೫೦ **ಚಿತ್ರಗುಪ್ತ** ಬೆಂಗಳೂರ

"ಕವಿಹೃದಯದ ಪತ್ರಿಕೋದ್ಯೋಗಿಯೋರ್ವರು ಆಗಾಗ್ಗೆ ಬರೆದ ಲೇಖಗಳು ಹಾಗೂ ಮಾಡಿದ ಭಾಷಣಗಳ ಸಂಗ್ರಹವಿದು. ಮುಖ್ಯವಾಗಿ ಸಂಗೀತ, ಸಾಹಿತ್ಯ, ಕಲೆಗಳ ಬಗ್ಗೆ ಪಾಂಡೇಶ್ವರರು ವಿದ್ವತ್ತಾಪೂರ್ಣ ವಿಚಾರಲಹರಿಗಳನ್ನಿಲ್ಲಿ ಹರಿಬಿಟ್ಟಿದ್ದಾರೆ..... ಪಾಂಡೇಶ್ವರರ ಈ ಉತ್ತಮ ಕೃತಿಯನ್ನು 'ಸರ್ವೋದಯ'ದವರು ಪ್ರಕಟಿಸಿ ಕನ್ನಡಿಗರ ಸರ್ವೋದಯಕ್ಕೆ ಕಾರಣರಾಗಿದ್ದಾರೆಂದರೆ ಉಪಚಾರದ ಮಾತಲ್ಲ."

೧೭-೩-೧೯೫೦ **ಜಯಹಿಂದ** ಹುಬ್ಬಳ್ಳಿ

"....ನಾಟ್ಯ, ನಟನೆ, ಸಂಗೀತ, ಯಕ್ಷಗಾನ, ನಾಟಕ ಮೊದಲಾದ ನಮ್ಮನಾಡಿನ ಪುರಾತನ ವಿಶಿಷ್ಟ ಕಲೆಗಳ ವಿಚಾರವಾಗಿ, ಆಧಾರಪೂರ್ವಕವಾಗಿ ಬರೆದಿರುವ ಶಾಸ್ತ್ರೀಯ ಲೇಖನಗಳ ಸಮೂಹವಿದು....."

೯-೭-೧೯೫೦ **ರಾಷ್ಟ್ರಬಂಧು** ಮಂಗಳೂರು

"ಇದೊಂದು ಕಲೆಗೆ ಸಂಬಂಧಿಸಿದ ವಿಚಾರಗಳ ಪ್ರಬಂಧ ಸಂಗ್ರಹ ಅನೇಕ ಮಹತ್ವದ ವಿಚಾರಗಳನ್ನೊಳಗೊಂಡು ಲೇಖಕರ ಕಲಾಭಿಜ್ಞತೆ ಹಾಗೂ ಆಳವಾದ ಅಭ್ಯಾಸವನ್ನೂ ತೋರ್ಪಡಿಸುತ್ತದೆ....."

೨೧-೫-೧೯೫೦ **ನುಡಿ** ಮುಂಬಯಿ

ಸುಪ್ರಸಿದ್ಧ ವಿದ್ವಾಂಸರೂ ಕವಿಗಳೂ ರಾಜಕಾರಣಧುರಂಧರರೂ
ಆದ ಶ್ರೀ ಡಿ. ವಿ. ಗುಂಡಪ್ಪನವರ ಅಭಿಪ್ರಾಯ:—

Dear friend, I read yesterday the book 'ರಾಘವನ' which you so kindly sent me some five months ago.... I have learnt much from the book.... you have dealt with some fundamental problems of art and poetry and set out your conclusions with convincing argument and vigour of expression.... I am happy that such a thoughtful book of essays on subjects of art and literature has been published in Kannada. Please accept my congratulations on your fine work....

yours sincerely–

D. V. Gundappa
22–7–1950

ಪ್ರಸಿದ್ಧ ಸಂಶೋಧಕರೂ ಈ ವರ್ಷದ ಸಾ. ಸಮ್ಮೇಳನಾಧ್ಯಕ್ಷರೂ ಆಗಿರುವ "ರಾಜಕವಿ" ಶ್ರೀ ಮಂ. ಗೋವಿಂದ ಪೈಯವರು ಬರೆದ ಪತ್ರದಲ್ಲಿ ಹೀಗೆಂದಿರುವರು—

"ರಾಘವನ್ ಪುಸ್ತಕ ಮುಟ್ಟಿತು, ಓದಿ ನೋಡಿದೆ; ಲೇಖನಗಳೆಲ್ಲವೂ ಬಹಳ ಚೆನ್ನಾಗಿವೆ. ತಮ್ಮನ್ನು ಮನಸಾರೆ ಅಭಿನಂದಿಸುತ್ತೇನೆ. ತಮ್ಮ ಲೇಖನಿ ಸಾಹಿತ್ಯದ ಎಲ್ಲಮಾರ್ಗಗಳಲ್ಲಿಯೂ ಅವಿರತವಾಗಿ ಚಲಿಸಿರುವಂತೆ ಶ್ರೀ ದೇವರು ತಮ್ಮಲ್ಲಿ ಅನುಗ್ರಹಿಸಲಿ."

ಮಂ. ಗೋವಿಂದ ಪೈ ಮಂಜೇಶ್ವರ
೨೩—೨—೧೯೫೧

ಪಾಂಡೇಶ್ವರಕೃತ ಇತರ ಗ್ರಂಥಗಳು—

ವಿವೇಕಾನಂದ ಚರಿತ್ರಂ (ಪುಟ್ಟಕಾವ್ಯ)
(೧೯೩೫)

ಕೊಳಲಕೃಷ್ಣ (ಖಂಡಕಾವ್ಯ)
(೧೯೩೭)

ಹೂಗೊಂಚಲು (ಕವನಗಳು)
(೧೯೩೮)

FRAGRANT BUDS (ಇಂಗ್ಲಿಷ ಕವನಗಳು)
(೧೯೩೯)

ಚೆಂಗಲವೆ (ಕವನಗಳು)
(೧೯೪೦)

ದಾಥರ್ (ಗದ್ಯ)
(೧೯೫೦)

ಬೇಗನೇ ಪ್ರಕಟವಾಗಲಿರುವ ಇವರ ಗದ್ಯಗ್ರಂಥ
"ಮಿಲಿತ ಪ್ರಬಂಧ"

ಜಿ. ಆರ್. ಪಾಂಡೇಶ್ವರ,
ದೇಶಪಾಂಡೆ ನಗರ ಹುಬ್ಬಳ್ಳಿ.